ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜುಲೈ 13, 2020

ಸಂಪುಟ : 47 ಸಂಚಿಕೆ : 64 ದೂರವಾಣಿ : 254736 ವಾಟ್ಸ್‌ಆ್ಯಪ್ : 91642 99999 ಪುಟ : 4 ರೂ : 3.00 www.janathavani.com Email: janathavani@mac.com



## ಲಕ್ಷಣಗಳು ಪಾಸಿಟಿವ್, ವರದಿ ನೆಗೆಟಿವ್

### ಲಕ್ಷಣಗಳನ್ನು ಆಧರಿಸಿ ಕೊರೊನಾ ಚಿಕಿತ್ಸೆ ನೀಡಲು ಪರಿಣಿತರ ನಿಲುವು

ನವದೆಹಲಿ, ಜು. 12 – ಕೊರೊನಾ ಸೋಂಕಿದ್ದರೂ ಸಹ ಟೆಸ್ಟ್ ಮಾಡಿಸಿದಾಗ ನೆಗೆಟಿವ್ ಬರುವ ಸಾಧ್ಯತೆ ಇದೆ ಎಂದು ಹೇಳಿರುವ ಪರಿಣಿತರು, ವರದಿ ಖಚಿತವಾಗುವವರೆಗೆ ಕಾಯದೇ ಕೊರೊನಾ ಲಕ್ಷಣ ಇರುವವರಿಗೆ ಚಿಕಿತ್ಸೆ ನೀಡಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಹಲವಾರು ಪ್ರಕರಣಗಳಲ್ಲಿ ಕೊರೊನಾ ಲಕ್ಷಣಗಳು ತೀವ್ರವಾಗಿದ್ದರೂ ಸಹ ಪರೀಕ್ಷೆ ನಡೆಸಿದಾಗ ನೆಗೆಟಿವ್ ಬಂದಿವೆ. ನಂತರದಲ್ಲಿ ಮತ್ತೆ ಪರೀಕ್ಷೆ ಮಾಡಿದಾಗ ಪಾಸಿಟಿವ್ ಬಂದಿದೆ.

ಕೊರೊನಾ ಸೋಂಕಿತರನ್ನು ಗುರುತಿಸಿ ಚಿಕಿತ್ಸೆ ಮಾಡಲು ಕೇವಲ ಆರ್.ಟಿ. - ಪಿ.ಸಿ. ಆರ್. ಫಲಿತಾಂಶವನ್ನು ಅವಲಂಬಿಸಬಾರದು. ಇದರ ಸಂವೇದನೆ ಕೇವಲ ಶೇ.70ರಷ್ಟಾಗಿದೆ. ಚಿಕಿತ್ಸೆಗಾಗಿ ಚಿಕಿತ್ಸಾತ್ಮಕ ಲಕ್ಷಣಗಳು ಹಾಗೂ ಸಿ.ಟಿ.ಸ್ಕ್ಯಾನ್ ವರದಿಗಳನ್ನು ಅವಲಂಬಿಸಬೇಕು ಎಂಬ ಬಗ್ಗೆ ಸಾಮಾನ್ಯ ಅಭಿಪ್ರಾಯ ಮೂಡಿ




ಬರುತ್ತಿದೆ ಎಂದು ಸಫ್ದರ್‌ಜಂಗ್ ಆಸ್ಪತ್ರೆಯ ಪಲ್ಮನರಿ ವಿಭಾಗದ ವೈದ್ಯರಾದ (2ನೇ ಪುಟಕ್ಕೆ)

## ನೆಗೆಟಿವ್ ವರದಿಯಿಂದ ಪರಿಹಾರವೂ ಇಲ್ಲ

### ಕೊರೊನಾದಿಂದ ಮೃತಪಟ್ಟರೂ ವಾರಿಯರ್ ಕುಟುಂಬಗಳಿಗೆ ನೆರವಿಲ್ಲ

ನವದೆಹಲಿ, ಜು. 12 –ಆರೋಗ್ಯ ಸೇವೆಯ ಮುಂಚೂಣಿಯಲ್ಲಿರುವ ಕಾರ್ಯಕರ್ತರು ಸಾವನ್ನಪ್ಪಿದಾಗ ಕೆಲವೊಮ್ಮೆ ಅವರ ವರದಿ ನೆಗೆಟಿವ್ ಬಂದಿರುತ್ತದೆ. ಇದರಿಂದಾಗಿ ಅವರು ಪರಿಹಾರದಿಂದ ವಂಚಿತರಾಗುತ್ತಾರೆ ಎಂದು ಏಐಐಎಂಎಸ್ ನಿವಾಸಿ ವೈದ್ಯರ ಒಕ್ಕೂಟ ಇತ್ತೀಚೆಗೆ ಐ.ಸಿ.ಎಂ.ಆರ್.ಗೆ ಪತ್ರ ಬರೆದಿತ್ತು.

ಮಹಾಮಾರಿಯ ಸಂದರ್ಭದಲ್ಲಿ ಅನಿರೀಕ್ಷಿತ ಹಾಗೂ ವಿವರಿಸಲಾಗದ ಸಾವುಗಳ ಬಗ್ಗೆ ವೃತ್ತಿಪರ ತನಿಖೆ ನಡೆಸಲು ಐ.ಸಿ.ಎಂ.ಆರ್. ಪರಿಣಿತರ ಸಮಿತಿ ರಚಿಸಬೇಕೆಂದು ಒಕ್ಕೂಟ ಒತ್ತಾಯಿಸಿತ್ತು.

ಯಾವುದೇ ಪರೀಕ್ಷೆಯೂ ಶೇ.100ರಷ್ಟು ಖಚಿತವಲ್ಲ. ಹೀಗಾಗಿ ಕೊರೊನಾ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಆರೋಗ್ಯ ಕಾರ್ಯಕರ್ತರಿಗೆ ನೆರವಾಗಬೇಕೆಂದು ಪತ್ರದಲ್ಲಿ ಒತ್ತಾಯಿಸಲಾಗಿತ್ತು.

ಇತ್ತೀಚೆಗೆ ದೆಹಲಿಯ ಮೌಲಾನಾ ಆಜಾದ್‌ದಂತ ವೈದ್ಯಕೀಯ ಸಂಸ್ಥೆಯ ಕಿರಿಯ ನಿವಾಸಿ ವೈದ್ಯರಾದ ಡಾ. ಅಭಿಷೇಕ್ (3ನೇ ಪುಟಕ್ಕೆ)

## ಭಾನುವಾರದ ಲಾಕ್‌ಗೆ ನಗರ ಮೌನ



ಭಾನುವಾರದ ಲಾಕ್‌ಡೌನ್ ಹಿನ್ನೆಲೆಯಲ್ಲಿ ಅನಗತ್ಯವಾಗಿ ಓಡಾಡುವ ವಾಹನ ಸವಾರರಿಗೆ ಬಿಸಿ ಮುಟ್ಟಿಸಲು ಕಾಯುತ್ತಿರುವ ಪೊಲೀಸ್ ಸಿಬ್ಬಂದಿ. ಏನು ಲಾಕ್ ಆದರೇನು? ಹಸಿವು ನೀಗಿಸಲು ಕಟ್ಟಿಗೆಯೇ ಬೇಕು ಎಂದು ತಲೆ ಮೇಲೆ ಹೊತ್ತು ಹೊರಟ ಮಹಿಳೆ. ಪಿ.ಬಿ. ರಸ್ತೆಯಲ್ಲಿನ ಚಿತ್ರವಿದು.

ದಾವಣಗೆರೆ, ಜು. 12- ಭಾನುವಾರದ ಲಾಕ್‌ಡೌನ್ ಹಿನ್ನೆಲೆಯಲ್ಲಿ ನಗರ ಮೌನವಾಗಿತ್ತು. ಬೆಳಿಗ್ಗೆ 9 ಗಂಟೆವರೆಗೆ ಹಣ್ಣು, ತರಕಾರಿ, ಹಾಲು ಮಾರಾಟ ಎಂದಿನಂತೆಯೇ ಇತ್ತು. ತರಕಾರಿ ಮಾರುಕಟ್ಟೆಯಲ್ಲಿ ಜನ ದಟ್ಟಣೆ ವಿರಳವಾಗಿತ್ತು

ಬೆಳಿಗ್ಗೆ 10 ನಂತರ ನಗರ ನಿಧಾನವಾಗಿ ಮೌನವಾಗತೊಡಗಿತು. ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ವ್ಯಾಪಾರ ವಹಿವಾಟು ಸಂಪೂರ್ಣ ಸ್ಥಗಿತವಾಗಿತ್ತು. ಆದರೆ ಬಡಾವಣೆಗಳಲ್ಲಿ ಮಾತ್ರ ಲಾಕ್‌ಡೌನ್‌ಗೆ ಸೂಕ್ತ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಜನತೆ ಎಂದಿನಂತೆಯೇ ವಸ್ತುಗಳ ಕೊಡು-ಕೊಳ್ಳುವಿಕೆಯಲ್ಲಿ ನಿರತರಾಗಿದ್ದರು.

ಬಸ್, ಟ್ಯಾಕ್ಸಿಗಳು ರಸ್ತೆಗಿಳಿಯಲ್ಲಿಲ್ಲ. ಆದರೆ ಅಲ್ಲಲ್ಲಿ ಆಟೋಗಳು ಸಂಚರಿಸುತ್ತಿದ್ದವಾದರೂ, ಪೊಲೀಸರ ಭಯಕ್ಕೆ ನಂತರ ಅವುಗಳ ಓಟಾಟವೂ ಸ್ಥಗಿತವಾಯಿತು. ಗ್ರಾಹಕರ ವಿರಳತೆಯ ನಡುವೆಯೂ ಪೆಟ್ರೋಲ್ ಬಂಕ್‌ಗಳು ಕಾರ್ಯನಿರ್ವಹಿಸಿದವು. ಔಷಧಿ ಅಂಗಡಿ, ದಿನಸಿ ಅಂಗಡಿ, ಮಿಲ್ಕ್ ಪಾರ್ಲರ್‌ಗಳು, ಬೇಕರಿಗಳು ತೆರೆಯಲ್ಪಟ್ಟಿದ್ದವು.

ವಾಹನಗಳನ್ನು ತಡೆದು ಪೊಲೀಸರು ಪ್ರಶ್ನಿಸಿ, ಎಚ್ಚರಿಕೆ ನೀಡಿ ಕಳುಹಿಸುತ್ತಿದ್ದುದು ಅಲ್ಲಲ್ಲಿ ಕಂಡು ಬಂತು. ಸಂಜೆ ಅಲ್ಲಲ್ಲಿ ಮತ್ತೆ ವಾಹನಗಳ ಓಡಾಟ ಆರಂಭವಾಗಿತ್ತು. ರಿಂಗ್ ರಸ್ತೆ, ವಿನೋಬನಗರ, ಜಾಲಿ ನಗರ, ಭಗತ್ ಸಿಂಗ್ ನಗರ, ನಿಟುವಳ್ಳಿ ಸೇರಿದಂತೆ ಕೆಲ ಪ್ರದೇಶಗಳಲ್ಲಿ ಜನರು ಲಾಕ್‌ಡೌನ್‌ಗೆ ಬೆಲೆಯೇ ಇಲ್ಲ ಎಂಬಂತೆ ಮಾ ಮೂ ಲಿ ಯಾ ಗಿ ಯೇ (3ನೇ ಪುಟಕ್ಕೆ)

## ಸಚಿನ್ ಪೈಲಟ್ ಬಂಡಾಯ

### ಅಪಾಯದಲ್ಲಿ ರಾಜಸ್ಥಾನದ ಕಾಂಗ್ರೆಸ್ ಸರ್ಕಾರ

ಜೈಪುರ/ನವದೆಹಲಿ, ಜು. 12 – ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ವಿರುದ್ಧ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಬಹಿರಂಗ ಬಂಡಾಯ ಎದ್ದಿದ್ದು, ಕಾಂಗ್ರೆಸ್ ಸರ್ಕಾರ ಅಪಾಯ ಎದುರಿಸುತ್ತಿದೆ.

ಮುಖ್ಯಮಂತ್ರಿ ಗೆಹ್ಲೋಟ್ ಇಂದು ರಾತ್ರಿ ಶಾಸಕರ ಸಭೆ ಕರೆದಿದ್ದಾರಾದರೂ, ಪೈಲಟ್ ನೇತೃತ್ವದ ಬಣದ ಶಾಸಕರು ಆ ಸಭೆಯಿಂದ ದೂರ ಉಳಿದಿದ್ದಾರೆ.

ದೆಹಲಿಯಲ್ಲಿ ಬಂಡಾಯದ ಬಾವುಟ ಹಾರಿಸಿರುವ ಪೈಲಟ್, ನನ್ನ ಬೆಂಬಲಕ್ಕೆ 30 ಶಾಸಕರಿದ್ದಾರೆ. ನಾವು ಗೆಹ್ಲೋಟ್ ಕರೆದಿರುವ ಭಾನುವಾರದ ಸಭೆಗೆ ಹೋಗುವುದಿಲ್ಲ. ಯಾರೊಬ್ಬರೂ ತಮ್ಮ ಮನೆ ಬಿಟ್ಟು ಹೋಗಲು ಬಯಸುವುದಿಲ್ಲ. ಆದರೆ, ಅನ್ಯಾಯ ಸಹಿಸಲು ಸಾಧ್ಯವಾಗುವುದಿಲ್ಲ ಎಂದಿದ್ದಾರೆ.

ನಾಳೆ ಸೋಮವಾರ ನಡೆಯಲಿರುವ ಶಾಸಕಾಂಗ ಪಕ್ಷದ ಸಭೆಗೂ ನಾವು ಹೋಗುವುದಿಲ್ಲ ಎಂದಿರುವ ಪೈಲಟ್, ಗೆಹ್ಲೋಟ್ ಸರ್ಕಾರ ಈಗ ಅಲ್ಪಮತಕ್ಕಿಳಿದಿದೆ ಎಂದಿದ್ದಾರೆ.



ಸೋಮವಾರ ಬೆಳಿಗ್ಗೆ ಜೈಪುರದಲ್ಲಿ ಕಾಂಗ್ರೆಸ್ ಶಾಸಕರ ಮತ್ತೊಂದು ಸಭೆ ಕರೆಯಲಾಗಿದೆ. ಅದರಲ್ಲಿ ರಾಜಸ್ಥಾನದ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಅವಿನಾಶ್ ಪಾಂಡೆ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಈ ನಡುವೆ ಹೇಳಿಕೆ ನೀಡಿರುವ ಪಾಂಡೆ, ಪೈಲಟ್ ಕಳೆದ ಎರಡು ದಿನಗಳಿಂದ ತಮ್ಮ ಸಂಪರ್ಕಕ್ಕೆ ಸಿಗುತ್ತಿಲ್ಲ. ಅವರಿಗೆ ನಾನು ಸಂದೇಶ ಕಳಿಸಿದ್ದೇನೆ. ಆದರೂ ರಾಜಸ್ಥಾನ ಸರ್ಕಾರಕ್ಕೆ ಯಾವುದೇ ಅಪಾಯವಿಲ್ಲ ಎಂದಿದ್ದಾರೆ.

ಪರಿಸ್ಥಿತಿ ನಿಭಾಯಿಸಲು ಕಾಂಗ್ರೆಸ್ ಹೈಕಮಾಂಡ್ ನಾಯಕರಾದ ಅಜಯ್ ಮಾಕೆನ್ ಹಾಗೂ ರಣದೀಪ್ ಸುರ್ಜೇವಾಲಾ ಅವರನ್ನು ರಾಜ್ಯಕ್ಕೆ ರವಾನಿಸಿದೆ.

ಈ ನಡುವೆ, ಪೈಲಟ್ ಪಾಳೆಯದವರು ಎಂದು ಹೇಳಲಾಗುತ್ತಿದ್ದ ದೆಹಲಿಗೆ ತೆರಳಿದ ಕಾಂಗ್ರೆಸ್‌ನ ಮೂವರು ಶಾಸಕರು ರಾಜಸ್ಥಾನಕ್ಕೆ ವಾಪಸ್ಸಾಗಿದ್ದಾರೆ.

ಶಾಸಕರಾದ ರೋಹಿತ್ ಬೋಹ್ರಾ, ಡ್ಯಾನಿಶ್ ಅಬ್ರಾರ್ ಹಾಗೂ ಚೇತನ್ ದುಡಿ ಅವರು ಗೆಹ್ಲೋಟ್ ನಿವಾಸದಲ್ಲಿ (3ನೇ ಪುಟಕ್ಕೆ)

## ಐಶ್ವರ್ಯ, ಪುತ್ರಿ ಆರಾಧ್ಯಗೆ ಸೋಂಕು



ಮುಂಬೈ, ಜು. 12 – ಬಾಲಿವುಡ್ ನಟರಿಗೆ ಕೊರೊನಾ ಕಾಟ ಮುಂದುವರೆದಿದ್ದು, ನಟಿ ಐಶ್ವರ್ಯ ರೈ ಬಚ್ಚನ್ ಹಾಗೂ ಪುತ್ರಿ ಆರಾಧ್ಯಗೆ ಕೊರೊನಾ ಸೋಂಕಿರುವುದು ಕಂಡುಬಂದಿದೆ.

ನಿನ್ನೆಯಷ್ಟೇ ತಾರೆ ಅಮಿತಾಬ್ ಬಚ್ಚನ್ ಹಾಗೂ (3ನೇ ಪುಟಕ್ಕೆ)


### ಭದ್ರಾ ಜಲಾಶಯ

ಇಂದಿನ ಮಟ್ಟ : 147 ಅಡಿ 3 ಇಂಚು
ಒಳ ಹರಿವು : 3121 ಕ್ಯೂಸೆಕ್ಸ್
ಹೊರ ಹರಿವು : 170 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 133.6 ಅಡಿ

## ಒಂದೇ ದಿನ 66 ಜನ ಗುಣಮುಖ

### ಜಿಲ್ಲೆಯಲ್ಲಿ 400 ದಾಟಿದ ಬಿಡುಗಡೆಯಾದವರ ಸಂಖ್ಯೆ

ದಾವಣಗೆರೆ, ಜು. 12 – ಜಿಲ್ಲೆಯಲ್ಲಿ ಭಾನುವಾರ 66 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಇದೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಇಷ್ಟು ಪ್ರಮಾಣದ ಜನರು ಒಂದೇ ದಿನ ಗುಣಮುಖರಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 104ಕ್ಕೆ ಗಣನೀಯವಾಗಿ ಇಳಿಕೆಯಾಗಿದೆ.



ಇದೇ ದಿನದಂದು ಜಿಲ್ಲೆಯಲ್ಲಿ 20 ಕೊರೊನಾ ಪ್ರಕರಣಗಳು ಕಾಣಿಸಿಕೊಂಡಿವೆ. ಭಾನುವಾರ ಜಿಲ್ಲೆಯಲ್ಲಿ ಮೂವರು ಕೊರೊನಾ ಸೋಂಕಿನಿಂದ ಸಾವನ್ನಪ್ಪಿದ್ದು, ಜಿಲ್ಲೆಯಲ್ಲಿ ಕೊರೊನಾದಿಂದ ಮೃತರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ.

ಜಿಲ್ಲೆಯಲ್ಲಿ ಇದುವರೆಗೂ 534 ಸೋಂಕಿತರು ಕಂಡು ಬಂದಿದ್ದಾರೆ. ಇವರ ಪೈಕಿ 410 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ರಾಣೇಬೆನ್ನೂರಿನ 53 ವರ್ಷದ ವ್ಯಕ್ತಿ ನಗರದ ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಹರಿಹರದ 55 ವರ್ಷದ ಮಹಿಳೆ ಹಾಗೂ ಹಾವೇರಿ ಜಿಲ್ಲೆಯ ಕನವಳ್ಳಿಯ 60 ವರ್ಷದ ವ್ಯಕ್ತಿ ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಕೊರೊನಾದಿಂದ ಸಾವನ್ನಪ್ಪಿದ್ದಾರೆ. ಮೃತರೆಲ್ಲರೂ 50 ವರ್ಷ ಮೀರಿದವರಾಗಿದ್ದು, ಅವರು ಸಕ್ಕರೆ ಕಾಯಿಲೆ ಹಾಗೂ ಅತಿ ರಕ್ತದೊತ್ತಡದಂತಹ ಸಮಸ್ಯೆಗಳಿಂದ ಬಳಲುತ್ತಿದ್ದರು.

ದಾವಣಗೆರೆಯ ಮಿಲ್ಲತ್ ಕಾಲೋನಿ, ನಿಟುವಳ್ಳಿ, ಭಗತ್ ಸಿಂಗ್ ನಗರ, ಎಂ.ಸಿ.ಸಿ. ಬಿ ಬ್ಲಾಕ್, ಕೆ.ಬಿ. ಬಡಾವಣೆ, (3ನೇ ಪುಟಕ್ಕೆ)

## ಕೊರೊನಾ ಶಂಕೆ : ಮಹಿಳೆಯ ಶವ ಸಂಸ್ಕಾರಕ್ಕೆ ಸಾರ್ವಜನಿಕರ ವಿರೋಧ

ರಾಣೇಬೆನ್ನೂರು, ಜು.12- ಅನಾರೋಗ್ಯದಿಂದ ನಿಧನ ಹೊಂದಿದ ಮಹಿಳೆಯೊಬ್ಬರ ಶವ ಸಂಸ್ಕಾರಕ್ಕೆ ಸಾರ್ವಜನಿಕರು ಅಡ್ಡಿ ಪಡಿಸಿದ ಘಟನೆ ಭಾನುವಾರ ನಗರದ ಕೂನಬೇವು ಪ್ಲಾಟ್ ಸ್ಮಶಾನದ ಬಳಿ ನಡೆಯಿತು.

**ರಾಣೇಬೆನ್ನೂರು**

ಮಾರುತಿ ನಗರದ ವ್ಯಕ್ತಿಯೊಬ್ಬರು ಇತ್ತೀಚೆಗೆ ಕೊರೊನಾದಿಂದಾಗಿ ದಾವಣಗೆರೆಯಲ್ಲಿ ಮೃತಪಟ್ಟಿದ್ದರು. ಅವರ ಪತ್ನಿಯು ಬೇರೆ ಕಾಯಿಲೆಯಿಂದ ನಿನ್ನೆ ನಿಧನರಾಗಿದ್ದರು. ಇಂದು ಅವರ ಶವ ಸಂಸ್ಕಾರ ನೆರವೇರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಮಹಿಳೆಯ ಸಾವಿಗೂ ಮುನ್ನ ಸ್ವ್ಯಾಬ್ ಪರೀಕ್ಷೆ ಮಾಡಲಾಗಿದ್ದು, ವರದಿ ನೆಗೆಟಿವ್ ಬಂದಿದೆ. ಆದರೂ ಕೂಡ ಸ್ಮಶಾನ ಪ್ರದೇಶದ ಸುತ್ತಮುತ್ತಲಿನ ಜನರು ಯಾವುದೇ ಕಾರಣಕ್ಕೂ ಶವಸಂಸ್ಕಾರ (2ನೇ ಪುಟಕ್ಕೆ)

## ಯಲವಟ್ಟಿಯ ವೃದ್ಧರೊಬ್ಬರಿಗೆ ಕೊರೊನಾ ಪಾಸಿಟಿವ್

ಮಲೇಬೆನ್ನೂರು, ಜು.12- ಯಲವಟ್ಟಿ ಗ್ರಾಮದ 66 ವರ್ಷದ ವೃದ್ಧರೊಬ್ಬರು ಅನಾರೋಗ್ಯದ ಕಾರಣ ಮಣಿಪಾಲದ ಕಸ್ತೂರಿಬಾ ಆಸ್ಪತ್ರೆಗೆ ದಾಖಲಾದ 10 ದಿನಗಳ ನಂತರ ಕೊರೊನಾ ಪಾಸಿಟಿವ್ ದೃಢಪಟ್ಟಿದೆ.

**ಉಡುಪಿಯ ಕೋವಿಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ**

ಅನ್ನನಾಳದ ತೊಂದರೆಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರನ್ನು ಕೊರೊನಾ ಟೆಸ್ಟ್ ಕೂಡಾ ಮಾಡಲಾಗಿತ್ತು ಎನ್ನಲಾಗಿದೆ. ನಿನ್ನೆ ಅವರ ಗಂಟಲು ದ್ರವ ಪರೀಕ್ಷಾ ವರದಿ ಪಾಸಿಟಿವ್ ಬಂದ ಕಾರಣ, ಉಡುಪಿಯ ಕೋವಿಡ್ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ.

ವೃದ್ಧ ವ್ಯಕ್ತಿಯ ವರದಿ ಪಾಸಿಟಿವ್ ಬಂದಿರುವುದರಿಂದ ಯಲವಟ್ಟಿಯಲ್ಲಿರುವ ಅವರ ಕುಟುಂಬದವರನ್ನು ಹೋಂ ಕ್ವಾರಂಟೈನ್ ಮಾಡಿ, 3 ಮನೆಗಳನ್ನು ಸೀಲ್‌ಡೌನ್ ಮಾಡಲಾಗಿದೆ. (3ನೇ ಪುಟಕ್ಕೆ)

## ಹರಿಹರ: 10 ಪಾಸಿಟಿವ್

ಹರಿಹರ, ಜು.12- ನಗರದಲ್ಲಿ ಒಂಬತ್ತು ಮತ್ತು ಗ್ರಾಮೀಣ ಪ್ರದೇಶದ ಕೊಂಡಜ್ಜಿ ಗ್ರಾಮದಲ್ಲಿ ಒಂದು ಸೇರಿದಂತೆ ಹರಿಹರ ತಾಲ್ಲೂಕಿನಲ್ಲಿ ಒಟ್ಟು ಹತ್ತು ಕೊರೊನಾ ಸೋಂಕು ಪ್ರಕರಣಗಳು ದೃಢಪಟ್ಟಿವೆ ಎಂದು ಆರೋಗ್ಯ ಇಲಾಖೆಯ ಎಂ.ವಿ. ಹೊರಿಕೇರಿ ತಿಳಿಸಿದರು.

**ನಾಯಕರು, ಅಧಿಕಾರಿಗಳ ದ್ವಂದ್ವ ಹೇಳಿಕೆಗಳಿಗೆ ಜನ ಕಂಗಾಲು**

ನಗರದ ಆಂಜನೇಯ ಬಡಾವಣೆ, ಟಿಪ್ಪುನಗರ, ಕುಂಬಾರ ಓಣಿ, ಇಂದ್ರಾ ನಗರ ಐದನೇ ಕ್ರಾಸ್, ಹಳ್ಳದಕೇರಿ, ಸಾರ್ವಜನಿಕ ಆಸ್ಪತ್ರೆಯ ಮುಂಭಾಗ, ಎ.ಪಿ.ಎಂ.ಸಿ. ಪಾಟೀಲ್ ಸಾಮಿಲ್, ಗಿರಿಜ್ ಮೆಡಿಕಲ್ ಪಕ್ಕ ಸೇರಿದಂತೆ ಗ್ರಾಮೀಣ ಪ್ರದೇಶವಾದ ಕೊಂಡಜ್ಜಿ ಗ್ರಾಮದಲ್ಲಿ ಒಂದು ಸೇರಿದಂತೆ ಹರಿಹರ ತಾಲ್ಲೂಕಿನಲ್ಲಿ ಒಟ್ಟು ಹತ್ತು ಕೊರೊನಾ ಸೋಂಕು ಪ್ರಕರಣಗಳು ಕಂಡುಬಂದಿವೆ ಎಂದು ತಿಳಿಸಿದರು. ಡಾ. ವಿಶ್ವನಾಥ್ ಮಾತನಾಡಿ, ನಗರದ ಗುತ್ತೂರು ಗ್ರಾಮದ ಹಾಸ್ಟೆಲ್ ಕ್ವಾರಂಟೈನ್ ನಲ್ಲಿ ಇದ್ದ 39 (3ನೇ ಪುಟಕ್ಕೆ)

## ಇಂದಿನಿಂದ ಎಸ್ಸೆಸ್ಸೆಲ್ಸಿ ಮೌಲ್ಯಮಾಪನ

ಬೆಂಗಳೂರು, ಜು. 12 - ಕಳೆದ ವಾರ ಮುಕ್ತಾಯವಾದ 2020ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯವು ನಾಳೆ ಸೋಮವಾರದಿಂದ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆರಂಭವಾಗಲಿದೆ.

ಆದರೆ, ರಾಜ್ಯ ಸರ್ಕಾರ ಜುಲೈ 14 ರಿಂದ 22 ವರೆಗೆ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಲಾಕ್‌ಡೌನ್ ಘೋಷಿಸಿರುವ ಹಿನ್ನೆಲೆಯಲ್ಲಿ ಅಲ್ಲಿ ಮೌಲ್ಯಮಾಪನ ನಡೆಯುವುದಿಲ್ಲ.

ಉಳಿದಂತೆ ಎಲ್ಲಾ ಜಿಲ್ಲೆಗಳ ಮೌಲ್ಯಮಾಪನ ಕಾರ್ಯವು ನಾಳೆಯಿಂದ ನಿಗದಿಯಂತೆ ನಡೆಯಲಿದೆ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

## ಪಾಸಿಟಿವ್ ವರದಿಯಾದರೆ ಸಂಬಂಧಿಸಿದ ಆಸ್ಪತ್ರೆಗಳೇ ಆಂಬ್ಯುಲೆನ್ಸ್ ಕಳುಹಿಸಬೇಕು

**ಸಾವಿನ ಪ್ರಮಾಣ ತಗ್ಗಿಸಲು ಕಟ್ಟುನಿಟ್ಟಿನ ಕ್ರಮಕ್ಕೆ ಜಿಲ್ಲಾಧಿಕಾರಿ ಸೂಚನೆ**

ದಾವಣಗೆರೆ, ಜು.12- ಖಾಸಗಿ ಆಸ್ಪತ್ರೆಗಳಲ್ಲಿದ್ದ ವ್ಯಕ್ತಿಗಳಲ್ಲಿ ಕೋವಿಡ್ ಸೋಂಕು ದೃಢಪಟ್ಟಿದ್ದರೆ ಆ ಆಸ್ಪತ್ರೆಯವರೇ ಆಂಬ್ಯುಲೆನ್ಸ್ ಕಳುಹಿಸಬೇಕು. ನಂತರ ಅದರ ವೆಚ್ಚವನ್ನು ಭರಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಮುಖ್ಯಮಂತ್ರಿಗಳ ವಿಡಿಯೋ ಸಂವಾದದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಛೇರಿ ಸಂಭಾಗಣದಲ್ಲಿ ಏರ್ಪಡಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೆಲ ಖಾಸಗಿ ಆಸ್ಪತ್ರೆಯವರು ಪಾಸಿಟಿವ್ ವರದಿಯಾದಾಗ ಸಿ.ಜಿ. ಆಸ್ಪತ್ರೆಗೆ ಕರೆ ಮಾಡಿ ಆಂಬ್ಯುಲೆನ್ಸ್ ಕಳುಹಿಸಲು ಹೇಳುತ್ತಾರೆ ಎಂದು ಡಿಹೆಚ್‌ಓ ಅವರು ಸಭೆಯಲ್ಲಿ ಪ್ರಸ್ತಾಪಿಸಿದಾಗ ಜಿಲ್ಲಾಧಿಕಾರಿಗಳು ಮೇಲಿನಂತೆ ಪ್ರತಿಕ್ರಿಯಿಸಿ, ಶೀಘ್ರವೇ ಖಾಸಗಿ ಆಸ್ಪತ್ರೆಗಳಿಗೆ ಆದೇಶಿಸಲಾಗುವುದು ಎಂದರು.

ತಾಲ್ಲೂಕು ಕೇಂದ್ರಗಳಲ್ಲಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಬೆಡ್‌ಗಳ ವ್ಯವಸ್ಥೆ, ವೆಂಟಿಲೇಟರ್ ಹಾಗು ಹೆಚ್ಚು ಕೇಸುಗಳು ಬಂದರೆ ಹೇಗೆ ಸಿದ್ದವಿರಬೇಕೆಂಬುದರ ಬಗ್ಗೆ ತಿಳಿಸಿ. ಕೆಲ ತಾಲ್ಲೂಕು ಕೇಂದ್ರಗಳಲ್ಲಿ ನೋಂದಣಿ ಇಲ್ಲದ ವೈದ್ಯರುಗಳು ಚಿಕಿತ್ಸೆ ನೀಡುತ್ತಿದ್ದು ಕೊರೊನಾ ಪಾಸಿಟಿವ್ ಪ್ರಕರಣಗಳ ಮಾಹಿತಿಯನ್ನು ನೀಡುತ್ತಿಲ್ಲ. ಅಂತಹವರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಒಂದು ಅಂದಾಜಿನಂತೆ ನೂರು ಪಾಸಿಟಿವ್ ಪ್ರಕರಣಗಳಿಗೆ ಒಂದು ಸಾವು ಸಂಭವಿಸಬಹುದಾಗಿದೆ. ನಮ್ಮಲ್ಲಿ ಆ ಪ್ರಮಾಣ ಸ್ವಲ್ಪ ಹೆಚ್ಚಿದೆ. ಈ ಪ್ರಮಾಣ ತಗ್ಗಿಸಲು ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಅನುಸರಿಸುವ ಮೂಲಕ ಸಾವಿನ ಪ್ರಮಾಣ ತಗ್ಗಿಸಲು ಶ್ರಮಿಸಬೇಕಾಗಿದೆ ಎಂದರು.

ಕಂಟೈನ್‌ಮೆಂಟ್ ಜೋನ್, ಬಫರ್ ಜೋನ್ ಸೇರಿದಂತೆ ಉಳಿದ ಪ್ರದೇಶಗಳಲ್ಲಿ ಹೆಚ್ಚಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸುವ ಮೂಲಕ ಪಾಸಿಟಿವ್ (3ನೇ ಪುಟಕ್ಕೆ)


## ಪುಣ್ಯಸ್ಮರಣೆ



ಶ್ರೀ ಗೌಡ್ರು ಸಣ್ಣ ಗಂಗಪ್ಪನವರು
ದಿ.: 04.12.1932

ಶ್ರೀಮತಿ ಗೌಡ್ರು ವೀರಮ್ಮನವರು
ದಿ.: 13.07.1994

ಶ್ರೀ ಗೌಡ್ರು ರಾಜಶೇಖರಪ್ಪನವರು
ದಿ.: 13.04.2017

ಶ್ರೀಮತಿ ಗೌಡ್ರು ಲಲಿತಮ್ಮನವರು
ದಿ.: 14.06.2018

ಸದಾ ನಿಮ್ಮಗಳ ಸ್ಮರಣೆಯಲ್ಲಿರುವ...
ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಗೌಡ್ರು ವಂಶಸ್ಥರು ನಾಗನೂರು.

**ಸೈಟು ಮಾರಾಟಕ್ಕೆ**
ಜೆ.ಹೆಚ್. ಪಟೇಲ್ ಮತ್ತು ಕೆ.ಹೆಚ್.ಬಿ.
JHP : 20x30 ಪೂರ್ವ (13 ಲಕ್ಷಕ್ಕೆ)
KHB : 30x50 ಪೂರ್ವ ಮತ್ತು 30x50 ದಕ್ಷಿಣ (16 ಲಕ್ಷಕ್ಕೆ)
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(J.H.Patel, KHBಯಲ್ಲಿ ಸೈಟು ಮಾರಾಟಕ್ಕೆ ಇದೆಯೇ? ಅಥವಾ ಖರೀದಿಗೆ ಬೇಕೇ ? ವಿಚಾರಿಸಿ.

**ವಾಜಪೇಯಿ ಲೇ ಔಟ್‌ನಲ್ಲಿ ಶಿವಪಾರ್ವತಿ ಲೇ ಔಟ್‌ನಲ್ಲಿ**
ಸೈಟುಗಳು ಮಾರಾಟಕ್ಕಿವೆ
30×40, 30×40 East ಅಕ್ಕ ಪಕ್ಕ, 30×40, 30×40 West ಅಕ್ಕ ಪಕ್ಕ, 40×40 West, 20x30, 20x30 North ಅಕ್ಕಪಕ್ಕ (J.H. Patel)
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**APPLICATIONS ARE INVITED**
to do income tax and GST work in the office of Tax practitioner. No. of vaccines 2. Minimum qualification graduation with computer knowledge. Last date for sending applications 15/07/2020. Contact :
+91 81975 70094

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ಇಲ್ಲದ ಯಾರಾದರೂ ಸಂಪರ್ಕಿಸಿ :
ಬುನಿಯಾದ
ಅಶೋಕ ರೋಡ್, ದಾವಣಗೆರೆ.
ಮೊ. 91136 73020

**ಮಳಿಗೆ ಬಾಡಿಗೆಗೆ ಇದೆ**
1300 Sqft ಎ.ವಿ.ಕೆ ರಸ್ತೆ ಸ್ಟೇಡಿಯಂ ಹತ್ತಿರ
83173 98303
97430 96695

**ಸೈಟುಗಳು ಮಾರಾಟಕ್ಕಿವೆ**
1) 30×50 (W) ಬನಶಂಕರಿ ಬಡಾವಣೆ
2) $\frac{40+35}{2}$ × 50 (E&W Corner)
ಲಕ್ಷ್ಮಿ ಬಡಾವಣೆ, ಎಸ್.ಎಸ್. ಆಸ್ಪತ್ರೆ ಹತ್ತಿರ
ಮೊ. 94492 35918

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ. ಡಬಲ್ ಬೆಡ್ ರೂಂ. ಮೂರು ಬೆಡ್ ರೂಂ ಮನೆಗಳು ಬಾಡಿಗೆಗೆ ಇವೆ. ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ ಹೊಸ ಮನೆಗಳು ಬಾಡಿಗೆಗೆ ಇವೆ. ಸಸ್ಯಹಾರಿಗಳಿಗೆ ಮಾತ್ರ
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ. 97421 44715

**ಸೈಟುಗಳು ಮಾರಾಟಕ್ಕೆ ಇವೆ**
**ಅಪಾರ್ಟ್‌ಮೆಂಟ್ ಮಾರಾಟಕ್ಕೆ ಇದೆ**
ಹೈಟೆಕ್ ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ವಿನಾಯಕ ಬಡಾವಣೆ, ಬನಶಂಕರಿ ಬಡಾವಣೆ, ಸಿದ್ದವೀರಪ್ಪ ಬಡಾವಣೆ, 30×40, 35×56, 30×50, 40×60, 30×80
94481 85946

**ಮಳಿಗೆ ಬಾಡಿಗೆಗೆ**
ಶಕ್ತಿ ನಗರದಲ್ಲಿ ವ್ಯಾಪಾರಕ್ಕೆ ಅಥವಾ ಗೋಡೌನ್‌ಗಳಿಗೆ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಸಂಪರ್ಕಿಸಿ :
ಮೊ. 94484 39639

**ಮನೆ ಬಾಡಿಗೆಗೆ ಇದೆ**
ಸಿಂಗಲ್ ಬೆಡ್ ರೂಂ (1BHK) ಮನೆ ಶಾಮನೂರಿನ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸಸ್ಯಹಾರಿಗಳಿಗೆ ಬಾಡಿಗೆಗೆ ಇದೆ.
94499 42404
94826 66522

**ಮನೆ ಬಾಡಿಗೆಗೆ ಇದೆ**
ದಾವಣಗೆರೆಯ ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತದಲ್ಲಿ ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
99167-25141, 96867-44588

**PRESTIGIOUS BUILDING FOR RENT**
on Mama's Joint Road, Near Swimming Pool, MCC 'B' Block for a business opportunity. call :
98440 65638

**ಮಳಿಗೆ ಬಾಡಿಗೆಗೆ ಇದೆ**
3ನೇ ಕ್ರಾಸ್, 5ನೇ ಮೇನ್, ಮಾಮಾಸ್ ಜಾಯಿಂಟ್ ರೋಡ್‌ನಲ್ಲಿ 1ನೇ ಮಹಡಿಯಲ್ಲಿ ಆಫೀಸ್‌ಗಾಗಿ, ಗ್ರೌಂಡ್‌ಫ್ಲೋರ್‌ನಲ್ಲಿ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿರಿ :
94489 21346
82177 72482

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, Duroflex Bed, ಕಿಟಕಿಗೆ Aluminium door ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜ ಪೇಟೆ, ದಾವಣಗೆರೆ
98445 81966

**ಹೋಟೆಲ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಪ್ರತಿಷ್ಠಿತ ಹೋಟೆಲ್ ಮಾರಾಟಕ್ಕಿದೆ. ಸಂಪರ್ಕಿಸಿ :
99013 43555

**ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ಮನೆ ಮಾರಾಟಕ್ಕಿದೆ**
ದಾವಣಗೆರೆಯ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ (ಶಾಮನೂರು ಹತ್ತಿರ) 55×30 ವಿಸ್ತೀರ್ಣದ, ಪೂರ್ವಾಭಿಮುಖದ, ಬೋರ್ ನೀರು ಸಹಿತ, ವಾಸ್ತು ಪ್ರಕಾರದ, ಸುವ್ಯವಸ್ಥಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
ಮೊ. : 9844363474
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)


# ಲಕ್ಷಣಗಳು ಪಾಸಿಟಿವ್, ವರದಿ ನೆಗೆಟಿವ್

**(1ನೇ ಪುಟದಿಂದ)** ಡಾ. ನೀರಜ್ ಗುಪ್ತ ಹೇಳಿದ್ದಾರೆ.

ರ್‍ಯಾಪಿಡ್ ಆಂಟಿಜನ್ ಪರೀಕ್ಷೆಯ ಸಂವೇದ ನಾಶೀಲತೆ ಸಹ ಕೇವಲ ಶೇ.40ರಷ್ಟಾಗಿದೆ. ಈ ಪರೀಕ್ಷೆಗಳನ್ನಷ್ಟೇ ನಾವು ಅವಲಂಬಿಸಿದರೆ ಹಲವಾರು ರೋಗಿಗಳಿಗೆ ಚಿಕಿತ್ಸೆ ಸಿಗುವುದಿಲ್ಲ ಎಂದು ಡಾ. ಗುಪ್ತ ತಿಳಿಸಿದ್ದಾರೆ.

ಆಂಟಿಬಡಿ ಟೆಸ್ಟ್‌ಗಳ ಸಂವೇದನಾಶೀಲತೆ ಶೇ.90ರಷ್ಟಾಗಿದೆ. ಆದರೆ, ಅವರು ಎಸ್.ಎ. ಆರ್.ಎಸ್. - ಸಿ.ಒ.ವಿ.2 ಹೊಂದಿದ್ದರೆ ಮಾತ್ರ ಟೆಸ್ಟ್ ಖಚಿತವಾಗುತ್ತದೆ. ಆರಂಭಿಕ ಹಂತದಲ್ಲಿ ರೋಗ ಗುರುತಿಸಲು ಸಾಧ್ಯವಾಗುವುದಿಲ್ಲ.

ಕೊರೊನಾ ಸೋಂಕಿನ ಪ್ರಮಾಣ ತೀವ್ರಗೊಳ್ಳುವುದನ್ನು ತಡೆಯುವುದರತ್ತ ಚಿಕಿತ್ಸೆ ಕೇಂದ್ರೀಕೃತವಾಗಿರಬೇಕಿದೆ. ಕೇವಲ ಟೆಸ್ಟ್ ವರದಿಗಳನ್ನು ಅವಲಂಬಿಸುವಂತಿಲ್ಲ. ನಾವು ರೋಗ ಲಕ್ಷಣಗಳನ್ನೂ ಪರಿಗಣಿಸಬೇಕಾಗುತ್ತದೆ ಎಂದವರು ವಿವರಿಸಿದ್ದಾರೆ.

ಏಐಐಎಂಎಸ್‌ನ ಗೆರಿಯಾಟ್ರಿಕ್ ಮೆಡಿಸಿನ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಡಾ. ವಿಜಯ್ ಗುರ್ಜಾರ್ ಈ ಬಗ್ಗೆ ಹೇಳಿಕೆ ನೀಡಿದ್ದು, ರೋಗಿಗಳಲ್ಲಿ ಕೊರೊನಾ ಲಕ್ಷಣವಿದ್ದ ಕೆಲ ಪ್ರಕರಣಗಳಲ್ಲಿ ಮೂರು ಹಾಗೂ ನಾಲ್ಕು ಬಾರಿ ಆರ್.ಟಿ. - ಪಿ.ಸಿ.ಆರ್. ಪರೀಕ್ಷೆ ನಡೆಸಿದರೂ ಸಹ ನೆಗೆಟಿವ್ ಬಂದಿರುವ ಪ್ರಕರಣಗಳಿವೆ. ಸಿ.ಟಿ. ಸ್ಕ್ಯಾನ್ ನಡೆಸಿದಾಗ ಅಟಿಪಿಕಲ್ ನ್ಯುಮೋನಿಯಾದ ಸುಳಿವು ಸಿಗುತ್ತದೆ. ಇದು ಕೊರೊನಾದ ಹೆಚ್ಚಿನ ಸಾಧ್ಯತೆ ತೋರಿಸುತ್ತದೆ ಎಂದಿದ್ದಾರೆ.

ನಂತರದಲ್ಲಿ ಅವರ ಪರೀಕ್ಷೆ ನಡೆಸಿದಾಗ ಆಂಟಿಬಡಿಗಳು ಕಂಡು ಬಂದಿರುತ್ತದೆ. ಇದು ಕೊರೊನಾ ವೈರಸ್ ಸೋಂಕನ್ನು ಖಚಿತ ಪಡಿಸುತ್ತದೆ. ಅವರಿಗೆ ಸೋಂಕಿದ್ದರೂ ಪಿ.ಟಿ.-ಪಿ. ಸಿ.ಆರ್. ಪರೀಕ್ಷೆಗಳಲ್ಲಿ ನೆಗೆಟಿವ್ ಬಂದಿರುತ್ತದೆ ಎಂದವರು ತಿಳಿಸಿದ್ದಾರೆ.

ಹೀಗಾಗಿ ರೋಗಿಗಳಲ್ಲಿ ಲಕ್ಷಣಗಳಿದ್ದರೆ ಹಾಗೂ ಅವರಲ್ಲಿ ಇತರೆ ಆರೋಗ್ಯ ಸಮಸ್ಯೆಗಳಿದ್ದರೆ ಕೊರೊನಾ ಮಾದರಿಯಲ್ಲೇ ಚಿಕಿತ್ಸೆ ನೀಡಬೇಕು. ಪರೀಕ್ಷೆ ಖಚಿತವಾಗುವವರೆಗೆ ಕಾಯಬಾರದು ಎಂದು ಡಾ. ಗುರ್ಜಾರ್ ಹೇಳಿದ್ದಾರೆ.

ದೆಹಲಿಯ ಇಂದ್ರಪ್ರಸ್ಥ ಅಪೋಲೋ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ನಿಖಿಲ್ ಮೋದಿ ಅವರು ಈ ಬಗ್ಗೆ ಮಾತನಾಡಿದ್ದು, ಗಂಟಲು ಹಾಗೂ ಮೂಗಿನಿಂದ ಪರೀಕ್ಷಾ ಮಾದರಿಗಳನ್ನು ಪಡೆಯುವಾಗ ತಪ್ಪು ಮಾಡುವುದೇ ನೆಗೆಟಿವ್ ಬರಲು ಪ್ರಮುಖ ಕಾರಣವಾಗಿದೆ ಎಂದಿದ್ದಾರೆ.

ಸರಿಯಾದ ರೀತಿಯಲ್ಲಿ ಮಾದರಿಯನ್ನೇ ಸಂಗ್ರಹಿಸಿಲ್ಲ ಎಂದ ಮೇಲೆ ಫಲಿತಾಂಶ ತಪ್ಪಾಗಿ ಬರುತ್ತದೆ. ಅಲ್ಲದೇ, ವೈರಸ್ ಪ್ರಮಾಣವೂ ಸಹ ಪ್ರಮುಖ ಪಾತ್ರ ವಹಿಸುತ್ತದೆ. ವೈರಸ್ ಪ್ರಮಾಣ ಕಡಿಮೆ ಇದ್ದರೆ ರೋಗಿಯಲ್ಲಿ ಸೋಂಕಿದ್ದರೂ ಫಲಿತಾಂಶ ನೆಗೆಟಿವ್ ಬರುತ್ತದೆ ಎಂದು ಡಾ. ಮೋದಿ ಹೇಳಿದ್ದಾರೆ.

ರೋಗ ಲಕ್ಷಣಗಳು ಕೊರೊನಾ ಕಡೆ ಇಂಗಿತ ವ್ಯಕ್ತಪಡಿಸುತ್ತಿದ್ದು, ಆರ್.ಟಿ. - ಪಿ.ಸಿ.ಆರ್. ಪರೀಕ್ಷೆ ಪದೇ ಪದೇ ನೆಗೆಟಿವ್ ಬಂದ ಸಂದರ್ಭದಲ್ಲಿ ಶ್ವಾಸಕೋಶಗಳ ಸಿ.ಟಿ. ಸ್ಕ್ಯಾನ್ ಸರಿಯಾದ ತಪಾಸಣೆಗೆ ಉಪಯುಕ್ತವಾಗುತ್ತದೆ ಎಂದವರು ವಿವರಿಸಿದ್ದಾರೆ

## ಇಂದಿನ ದಿಶಾ ಸಮಿತಿ ಸಭೆ ರದ್ದು

ದಾವಣಗೆರೆ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಏರ್ಪಾಡಾಗಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆ ರದ್ದಾಗಿದೆ.

## ಕೊರೊನಾ ಶಂಕೆ : ವಿರೋಧ



**(1ನೇ ಪುಟದಿಂದ)** ಮಾಡಕೂಡದು. ಅವರ ಪತಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಆದ್ದರಿಂದ ಅವರ ಪತ್ನಿ ಶವವನ್ನು ಇಲ್ಲಿ ಅಂತ್ಯ ಸಂಸ್ಕಾರ ಮಾಡಬಾರದೆಂದು ಆಗ್ರಹಿಸಿ, ದಿಢೀರ್ ಪ್ರತಿಭಟನೆ ನಡೆಸಿದರು.

ಸುದ್ದಿ ತಿಳಿದ ತಕ್ಷಣ ತಹಶೀಲ್ದಾರ್ ಬಸನಗೌಡ ಕೊಟ್ಟೂರು ಪೊಲೀಸ್ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಆಗಮಿಸಿ, ಪ್ರತಿಭಟನಾಕಾರರ ಜೊತೆ ಮಾತುಕತೆ ನಡೆಸಿದರು.

ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂದಕ್ಕೆ ಪಡೆದು ಶವ ಸಂಸ್ಕಾರ ನಡೆಸಲು ಅನುಮತಿ ನೀಡಲಾಯಿತು.

ಡಿವೈಎಸ್‌ಪಿ ಟಿ.ವಿ.ಸುರೇಶ್, ಗ್ರಾಮೀಣ ಸಿಪಿಐ ಸುರೇಶ್ ಸಗರಿ, ಪಿಎಸ್‌ಐಗಳಾದ ಮೇಘರಾಜ್, ಪ್ರಭು ಕೆಳಗಿನಮನಿ, ನಗರಸಭಾ ಸದಸ್ಯರಾದ ಪ್ರಕಾಶ ಪೂಜಾರ್, ಪಾಂಡುರಂಗ ಗಂಗಾವತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.


**ಉದ್ಯೋಗಾವಕಾಶ**
ಜಂತ್ಕಲ್ ಟ್ರೇಡರ್ಸ್‌ನಲ್ಲಿ ಇ-ಸ್ಕೂಟರ್ ಮಾರಾಟ ಮಾಡಲು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳು ಬೇಕಾಗಿದ್ದಾರೆ. ತಿಂಗಳಿಗೆ 10 ಸಾವಿರ ರೂ.ಗಳಿಗೂ ಅಧಿಕ ಸಂಪಾದಿಸಬಹುದು.
ವಿದ್ಯಾನಗರ ಕೊನೆ ಬಸ್ ನಿಲ್ದಾಣದ ಹತ್ತಿರ, ದಾವಣಗೆರೆ.
ಆಸಕ್ತ ಯುವಕ-ಯುವತಿಯರು ಸಂಪರ್ಕಿಸಿ :
Mob : 90367 14507

**HOTEL FOR SALE**
AT PRIME LOCATION IN DAVANAGERE
PH : 9886175076
9742097794

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu

Er. Mayur H N
B.E. (Civil), MBA, M.Tech, MIE
98444 88838

**HOUSE FOR RENT**
15x50 Single Bedroom House with Parking Facility at 5th Cross, K.B. Extn., Near Jayadeva Circle
72598 74574
MUHAMMAD ALI

**ಶೆಡ್ ಬಾಡಿಗೆಗೆ ಲಭ್ಯ**
ಲೋಕಿಕೆರೆ ರಸ್ತೆಯಲ್ಲಿರುವ ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾದಲ್ಲಿ 15HP ಪವರ್ ಹೊಂದಿರುವ 6000 ಚ.ಅಡಿ ಶೆಡ್ ಬಾಡಿಗೆಗೆ ಲಭ್ಯವಿದೆ.
ಮೊ. 99452 21201

**ಮನೆ ಬಾಡಿಗೆ/ಲೀಜ್‌ಗೆ**
ಭಗೀರಥ ಸರ್ಕಲ್ ಹತ್ತಿರ 10×30 ವಿಸ್ತೀರ್ಣದ ಚಿಕ್ಕ ಮನೆಗಳು ಬಾಡಿಗೆಗೆ/ಲೀಜ್‌ಗೆ ದೊರೆಯುತ್ತವೆ. ಸಂಪರ್ಕಿಸಿ
ಮೊ. 94484 39639

**ಬೇಕಾಗಿದ್ದಾರೆ**
ಎವರ್‌ಗ್ರೀನ್ ಫಂಡ್ಸ್ ಸಂಸ್ಥೆಯಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
ಎವರ್‌ಗ್ರೀನ್ ಚಿಟ್ ಫಂಡ್ಸ್ (ರಿ.)
#183, ಹಳ್ಳೂರು ಹಾಲಪ್ಪ ಬಿಲ್ಡಿಂಗ್, ನರಸರಾಜ ರಸ್ತೆ, ದಾವಣಗೆರೆ.
9480495555, 7795366606

**ನೇರ ಪರೀಕ್ಷೆಗಳು**
DIRECT EXAMS
PUC, Commerce, Arts, Science
ಎಸ್.ಎಸ್.ಎಲ್.ಸಿ. NTC, ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ವಿದ್ಯಾಸಂಸ್ಥೆ (ರಿ.)
ಎಲ್.ಕೆ.ಕಾಂಪ್ಲೆಕ್ಸ್ 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276
ಕೆಲವೇ ಸೀಟುಗಳಿವೆ.

**FOR RENT**
Vidyanagar
(Near Anjaneya Temple)
1BHK House
98802 45006

**ಮನೆಗಳು ಲೀಸ್‌ಗಿವೆ**
1 ಬೆಡ್ ರೂಂ. ಮುನ್ಸಿಪಲ್ ನೀರಿನ ಸೌಕರ್ಯವಿರುವ ನೆಲ ಮಹಡಿ ಮತ್ತು 1ನೇ ಮಹಡಿ ಮನೆಗಳು ನಿಟುವಳ್ಳಿ, ಲೆನಿನ್ ನಗರ, 6ನೇ ಮೇನ್, 7ನೇ ಕ್ರಾಸ್ ದಾವಣಗೆರೆ ಇಲ್ಲಿ ಲೀಸ್‌ಗೆ ಇವೆ.
ಲೀಸ್ ಮೊತ್ತ ರೂ.2.5 ಲಕ್ಷ.
ಆಸಕ್ತರು ಸಂಪರ್ಕಿಸಿ :
84312 34539

**ಬೇಕಾಗಿದ್ದಾರೆ**
ಆರ್ಡರ್ ಬುಕ್ಕಿಂಗ್ ಯಾವುದೇ ಪದವಿ
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮ,
ಪಿಜೆ. ಬಡಾವಣೆ, ಕಾಲೇಜ್ ರಸ್ತೆ, ಐಡಿಬಿಐ ಬ್ಯಾಂಕ್ ಹತ್ತಿರ, ಆಲೂರು ಚಂದ್ರಶೇಖರ್ ಹಾಸ್ಪಿಟಲ್ ಪಕ್ಕ, ದಾವಣಗೆರೆ.
80501 08120, 99160 67627

**SHARE MARKET**
Tranding & Free Demat A/c. Technical & Fundamental
Free Basic Information
SATHISH
95382 28125

**ವಿಶೇಷ ಸೂಚನೆ**
ದಿನಾಂಕ 13.07.2020ರಂದು ಸೋಮವಾರ ನಡೆಯಬೇಕಾಗಿದ್ದ
ದಿ|| ನಲ್ಲೂರು ಪಾಂಡುರಂಗಣ್ಣನವರ
'ವೈಕುಂಠ ಸಮಾರಾಧನೆ'ಯನ್ನು
ಕಾರಣಾಂತರದಿಂದ ಮುಂದೂಡಲಾಗಿದೆ.
ನಲ್ಲೂರು ವಿಶ್ವಾಸ್ ಜ್ಯೂಯಲರ್ಸ್
ನಲ್ಲೂರು ಪಾಂಡುರಂಗ ಜ್ಯೂಯಲರ್ಸ್
ರಾಜೇಶ್ ಪಿ. ರೇವಣಕರ್ - 94483 39499
ಸಂತೋಷ್ ಪಿ. ರೇವಣಕರ್ - 98448 21227

**ರಿಜಿಸ್ಟ್ರೇಷನ್‌ಗಳಿಗಾಗಿ ಸಂಪರ್ಕಿಸಿ**
ನಾವುಗಳು ನಿಧಿ ಬ್ಯಾಂಕ್, ನಿಧಿ ಕಂಪನಿ, ಕಂಪನಿಗಳು , FSSI, Annual Compliance ಇನ್ನೂ ಎಲ್ಲಾ ತರಹದ ರಿಜಿಸ್ಟ್ರೇಷನ್‌ಗಳು, ಕಂಪನಿಗಳ ಲೆಕ್ಕ ಪರಿಶೋಧನೆ ಮಾಡಿಕೊಡುತ್ತೇವೆ.
ಸಂಪರ್ಕಿಸಿ : 63619 35009

**ಕಂತಿನ ಸೌಲಭ್ಯ**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್ ವರ್ಕ್ಸ್, ಸೋಫಾ ರಿಪೇರಿ ವರ್ಕ್ಸ್, ಸ್ಪಂಜ್ ಬೆಡ್, ಫರ್ನಿಚರ್ ಮಾಡುತ್ತೇವೆ ಮತ್ತು ವುಡ್ ಪಾಲೀಷ್ ರಿಪೇರಿ ಮಾಡುತ್ತೇವೆ ಎಕ್ಸ್‌ಚೇಂಜ್ ಆಫರ್ ಇರುತ್ತದೆ.
95358 91637
93808 33743

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ. ಕೆ. ನಾಗರಾಜ್,** ಜಿ.ಪಂ. ಡ್ರೈವರ್
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ : **ಮಂಜುಳಾ ಟಿ.,** ಅತ್ತೆ : **ಕೆಂಪಮ್ಮ**
ಮಕ್ಕಳಾದ : **ಚೇತನ್, ಜ್ಯೋತಿ, ಆಶಾ, ಮಹಾಂತೇಶ್, ಸಂತೋಷ್, ಅರುಣ, ವಿಶ್ವಾಸ್**
ಅಳಿಯಂದಿರು : **ವೆಂಕಟೇಶ್, ಶಕುಂತಲ, ಅಶೋಕ್, ಶೋಭ ರವಿ, ದೀಪಾ, ಗಿರೀಶ್, ಪವನ್ ಹಾಗೂ ಮೊಮ್ಮಕ್ಕಳು**

**ಮುದಿರಾಮಪ್ಪ ಮಹೇಶ್ವರಪ್ಪ ನಿಧನ**



ದಾವಣಗೆರೆ ತಾಲ್ಲೂಕು ಐಗೂರು ಗ್ರಾಮದ ವಾಸಿ, ಮುದಿರಾಮಪ್ಪ ಮಹೇಶ್ವರಪ್ಪ (91) ಅವರು ದಿನಾಂಕ 12.07.2020ರ ಭಾನುವಾರ ಮಧ್ಯಾಹ್ನ 2.52ಕ್ಕೆ ನಿಧನರಾದರು. ಐವರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.07.2020ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಐಗೂರು ಗ್ರಾಮದಲ್ಲಿ ನೆರವೇರಲಿದೆ.

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ


**ಉದ್ಯೋಗಕ್ಕಾಗಿ ಶಿಕ್ಷಣ**
ಡಿಪ್ಲೋಮಾ ಪೇಷೆಂಟ್‌ಕೇರ್ ನರ್ಸಿಂಗ್,
NTC : ನರ್ಸರಿ ಟೀಚರ್ಸ್‌ಟ್ರೈನಿಂಗ್,
PUC : Arts./Comm..Sci.
ಮಾನಸ ಗಂಗೋತ್ರಿ ವಿದ್ಯಾಸಂಸ್ಥೆ
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013

**ತೃತೀಯ ವರ್ಷದ ಪುಣ್ಯಸ್ಮರಣೆ**
|| ಶ್ರೀ ಸಂತ ಸೇವಾಲಾಲ್ ಮರಿಯಮ್ಮದೇವಿ ಪ್ರಸನ್ನ || || ಶ್ರೀ ವೆಂಕಟೇಶ್ವರ ಪ್ರಸನ್ನ ||



**ಶ್ರೀಮತಿ ಕುಸುಮಾವತಿ ನಾಯ್ಕ**
(ದಿ|| ಕುಮಾರಸ್ವಾಮಿ ನಾಯ್ಕ, ನಿವೃತ್ತ ಎ.ಆರ್.ಟಿ.ಓ. ಇವರ ಧರ್ಮಪತ್ನಿ)
*ನೀವು ನಮ್ಮನ್ನಗಲಿ ಇಂದಿಗೆ (13.07.2020) ಮೂರು ವರ್ಷಗಳಾದವು. ನಿಮ್ಮ ಆದರ್ಶಗಳೇ ನಮಗೆ ದಾರೀದೀಪ. ನೀವು ತೋರಿಸಿದ ಸನ್ಮಾರ್ಗದಲ್ಲೇ ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...*
ಇಂತಿ ದುಃಖತಪ್ತರು : ಮಗಳು : **ಪದ್ಮಾವತಿ ನಾಯ್ಕ,**
ತಮ್ಮ : **ಸೇವಾ ನಾಯ್ಕ, ನಾಯ್ಕ ಕುಟುಂಬ ವರ್ಗ**
ನವೋದಯ ಆಸ್ಪತ್ರೆ, ನಾಯ್ಕ ನರ್ಸಿಂಗ್ ಹೋಂ, ನವೋದಯ ಮೆಡಿಕಲ್ ಅಂಡ್ ಜನರಲ್ ಸ್ಟೋರ್, ಬಾಲಾಜಿ ಎಂಟರ್ ಪ್ರೈಸಸ್, ಶ್ರೀ ನವೋದಯ ಮೆಡಿಕಲ್ಸ್ ಶ್ರೀ ನವೋದಯ ಆಗ್ರೋ ಫುಡ್ ಪ್ರೊಸೆಸಿಂಗ್ ಇಂಡಸ್ಟ್ರೀಯಲ್ ಕಾರ್ಪೊರೇಷನ್
**ಮತ್ತು ಸಿಬ್ಬಂದಿ ವರ್ಗ ಹಾಗೂ ಬಂಧು-ಮಿತ್ರರು.**
ಮೊ. 98863 55933, 99013 32242

**ಖಾಜಿ ಅತಾವುಲ್ಲಾ ರಜ್ವಿ ನಿಧನ**



ದಾವಣಗೆರೆ ರಜಾವುಲ್ಲಾ ಮುಸ್ತಫ ನಗರ, 1ನೇ ಮೇನ್, 1ನೇ ಕ್ರಾಸ್ ವಾಸಿ,
ದಿ|| ಹಾಜಿ ಖಾಜಿ ಅಬ್ದುಲ್ ರಬ್‌ಸಾಬ್ ಇವರ ಪುತ್ರ, ಮಿಲಾದ್ ಕಮಿಟಿ ಅಧ್ಯಕ್ಷರಾಗಿದ್ದ
**ಖಾಜಿ ಅತಾವುಲ್ಲಾ ರಜ್ವಿ** ಅವರು
ದಿನಾಂಕ 12.07.2020ರ ಭಾನುವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 73 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.07.2020ರ ಸೋಮವಾರ ಮಧ್ಯಾಹ್ನ 1.30ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**
ಮೊ. : 9738587779, 9916272122

**ಸಾಲಗಳಿಗಾಗಿ ಸಂಪರ್ಕಿಸಿ**
ವಾರ್ಷಿಕ 8% ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ, ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ, ವ್ಯವಸಾಯ, ವ್ಯವಹಾರ, ಪರ್ಸನಲ್ ಲೋನ್, ಬಂಗಾರ ಸಾಲಗಳು, 60 ಪೈಸೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳಿಗೆ ಸಂಪರ್ಕಿಸಿ :
73385 80345

**ಶ್ರೀ ದುರ್ಗಾದೇವಿ ಜ್ಯೋತಿಷ್ಯರು**
ಪಂಡಿತ್ ಪ್ರಶಾಂತ್ ಗುರೂಜಿ
ಸಮಸ್ಯೆ, ಹಣಕಾಸು, ಶತ್ರುಕಾಟ, ಸಾಲಬಾಧೆ, ಸತಿ-ಪತಿ ಕಲಹ, ನಿಮ್ಮ ಜೀವನದ ಏನೇ ಸಮಸ್ಯೆ ಇರಲಿ. ಎಷ್ಟೇ ಕಠಿಣವಾಗಿರಲಿ, ಕೇವಲ 3 ದಿನಗಳಲ್ಲಿ ಶಾಶ್ವತ ಪರಿಹಾರ ಫೋನಿನ ಮೂಲಕ
ಮೊ. : 90719 91136

**ಓಂ ಶ್ರೀ ನವಶಕ್ತಿ ಜ್ಯೋತಿಷ್ಯಂ**
ಶ್ರೀ ವಾಸುದೇವನ್ ಗುರೂಜಿ
99641-45591
ನಿಮ್ಮ ಸಮಸ್ಯೆಗಳಾದ ಉದ್ಯೋಗ, ವಿದ್ಯೆ, ಶತ್ರು ಕಾಟ, ಮದುವೆ ವಿಳಂಬ, ಪ್ರೇಮ ವಿಚಾರ, ಸಾಲ ಬಾಧೆ, ವ್ಯಾಪಾರ ನಷ್ಟ, ಮನೆಯಲ್ಲಿ ಅಶಾಂತಿ, ಇನ್ನಿತರೆ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿದ್ದರೂ ಶಾಸ್ತ್ರೋಕ್ತ ಪೂಜಾ ಪದ್ಧತಿಗಳಿಂದ ಚಾಲೆಂಜ್ ಕೇವಲ 3 ದಿನಗಳಲ್ಲಿ 100% ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ವಿಳಾಸ : ಬಸವೇಶ್ವರ ಕಾಂಪ್ಲೆಕ್ಸ್, #683/2, 8ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
ಮೊ. : 8971699826

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ರಕ್ತ ದಾನ ಶ್ರೇಷ್ಠ ದಾನ**

# ಆಸ್ಪತ್ರೆಗಳೇ ಆಂಬ್ಯುಲೆನ್ಸ್ ಕಳುಹಿಸಬೇಕು

**(1ನೇ ಪುಟದಿಂದ)** ಇರುವವರನ್ನು ಬೇಗ ಪತ್ತೆ ಹಚ್ಚಿ ಚಿಕಿತ್ಸೆ ನೀಡಬೇಕು. ಸೋಂಕು ಲಕ್ಷಣ ಇರುವವರು ತಡಮಾಡದೆ ಆಸ್ಪತ್ರೆಗೆ ಬಂದರೆ ಅವರು ಎಂತಹದೆ ಕಠಿಣ ಪರಿಸ್ಥಿತಿಯಲ್ಲಿದ್ದರೂ ಶೀಘ್ರ ಗುಣಪಡಿಸಲು ನೆರವಾಗುತ್ತದೆ ಎಂದರು.

ಪ್ರತಿ ವಾರ್ಡ್‌ಗಳಲ್ಲಿ ಟಾಸ್ಕ್‌ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ. ಅದರಲ್ಲಿ ಅಲ್ಲಿನ ಮುಖಂಡರು, ಜನಪ್ರತಿನಿಧಿಗಳು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸಿದರೆ ಯಶಸ್ಸು ಸಾಧ್ಯ.

ಸಂಬಂಧಿಸಿದ ವಾರ್ಡ್‌ನ ಅಧಿಕಾರಿ ಇದೆಲ್ಲವನ್ನೂ ಸರಿಯಾಗಿ ಫಾಲೋ ಅಪ್ ಮಾಡಬೇಕು ಮತ್ತು ವಾರ್ಡ್ ಮಟ್ಟದಲ್ಲಿ ರಚಿಸಿರುವ ಸಮಿತಿಯಲ್ಲಿರುವ ಎಲ್ಲಾ ಸದಸ್ಯರಿಗೆ ಸರಿಯಾದ ತರಬೇತಿ ನೀಡಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಮಾಡಬೇಕೆಂದರು.

ಜಿ.ಪಂ. ಸಿಇಒ ಪದ್ಮ ಬಸವಂತಪ್ಪ, ಎಸ್ಪಿ ಹನುಮಂತರಾಯ, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್ ನಾಯಕ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಡಿಹೆಚ್‌ಒ ರಾಘವೇಂದ್ರ ಸ್ವಾಮಿ, ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಡಾ ನಟರಾಜ್, ಡಾ.ಕಾಳಪ್ಪ ಹಾಗೂ ಇತರರು ಸಭೆಯಲ್ಲಿದ್ದರು.

# ಪೇಶ್ ಇಮಾಂ-ಮೌಜಿನ್‌ಗಳಿಗೆ ಪಿಂಚಣಿ ಯೋಜನೆ

ದಾವಣಗೆರೆ, ಜು.12- ಜಿಲ್ಲೆಯಲ್ಲಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಣಿಯಾದ ಮಸೀದಿಗಳಲ್ಲಿ ಈಗಾಗಲೇ ಪೇಶ್ ಇಮಾಂ ಹಾಗೂ ಮೌಜಿನ್ ಆಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವವರು ಹಾಗೂ 65 ವರ್ಷ ವಯೋಮಾನದ ವೃದ್ಧ ಪೇಶ್ ಇಮಾಮ್‌ರಿಗೆ ತಿಂಗಳಿಗೆ 2000 ರೂ. ಹಾಗೂ ಮೌಜಿನ್‌ರಿಗೆ ತಿಂಗಳಿಗೆ 1,500 ರೂ. ಪಿಂಚಣಿ ಪಾವತಿಸುವ ಯೋಜನೆಯನ್ನು ಮಂಡಳಿ ಜಾರಿಗೊಳಿಸಿದೆ. ವಿವರಕ್ಕೆ ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಮೊಹಮ್ಮದ್ ಸಿರಾಜ್ ಅವರನ್ನು ಸಂಪರ್ಕಿಸಬಹುದು.

# ಹೊನ್ನಾಳಿ : ಹಲವು ಬೀದಿಗಳ ಮನೆಗಳು ಸೀಲ್‌ಡೌನ್

ಹೊನ್ನಾಳಿ, ಜು.12- ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಕೊರೊನಾ ಪಾಸಿಟಿವ್ ಪತ್ತೆಯಾಗಿದ್ದು, ಇಂದು ಕೊರೊನಾ ಪೀಡಿತರ ಮನೆಗಳನ್ನು ಸೀಲ್‌ಡೌನ್ ಮಾಡಲಾಯಿತು.

ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಖುದ್ದು ಕೊರೊನಾ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಪಟ್ಟಣದ ಎ.ಕೆ.ಕಾಲೋನಿಯಲ್ಲಿ ಇಬ್ಬರಿಗೆ, ಅಕ್ಕಸಾಲಿಗರ ಬೀದಿಯಲ್ಲಿ ಒಬ್ಬರಿಗೆ, ಹೋಳೆಮಠ ಕಾಂಪೌಂಡ್‌ನ ಟಿ.ಎಂ.ರಸ್ತೆಯಲ್ಲಿ ಒಬ್ಬರಿಗೆ ಹಾಗೂ ತಾಲ್ಲೂಕಿನ ಬಿದರಗಡ್ಡೆ ಗ್ರಾಮದಲ್ಲಿ ಒಬ್ಬರಿಗೆ ಕೊರೊನಾ ಪಾಸಿಟಿವ್ ಬಂದಿದ್ದರೆ, ನ್ಯಾಮತಿ ತಾಲ್ಲೂಕಿನ ಕೆಂಚಿಕೊಪ್ಪ ಗ್ರಾಮದಲ್ಲಿ 2 ಮತ್ತು ತೆಗ್ಗಿಹಳ್ಳಿ ಗ್ರಾಮದಲ್ಲಿ 1 ಸೇರಿದಂತೆ ಒಟ್ಟು 8 ಪ್ರಕರಣಗಳು ವರದಿಯಾಗಿದ್ದು, ಎಲ್ಲಾ ಮನೆಗಳನ್ನು ಸೀಲ್ ಡೌನ್ ಮಾಡಿದರು.

ಹೊನ್ನಾಳಿಯಲ್ಲಿ 24 ಕೊರೊನಾ ಪಾಸಿಟಿವ್ ಪ್ರಕರಣಗಳು ಪತ್ತೆಯಾದರೆ, ಅದರಲ್ಲಿ 16 ಪ್ರಕರಣಗಳು ಹೊನ್ನಾಳಿ ಪಟ್ಟಣದಲ್ಲೇ ಪತ್ತೆಯಾಗಿವೆ. ಅದೇ ರೀತಿ ನ್ಯಾಮತಿ ತಾಲ್ಲೂಕಿನಲ್ಲಿ 7 ಕೊರೊನಾ ಪಾಸಿಟಿವ್ ಪತ್ತೆಯಾಗಿದ್ದು, ಅವಳಿ ತಾಲೂಕಿನಲ್ಲಿ 17 ಕಂಟೈನ್‌ಮೆಂಟ್ ಝೋನ್‌ಗಳನ್ನು ತೆರೆಯಲಾಗಿದೆ. ಸೀಲ್‌ಡೌನ್ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ ಶಾಸಕ ಎಂಪಿಆರ್, ಪರಿಸ್ಥಿತಿ ಅವಲೋಕಿಸಿದರಲ್ಲದೇ, ಜನರು ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ದಿನೇ ದಿನೇ ಕೊರೊನಾ ಪಾಸಿಟಿವ್ ಪ್ರಕರಣ ಪತ್ತೆಯಾಗುತ್ತಿದ್ದು, ಜನರು ಜಾಗರೂಕತೆಯಿಂದ ಇರುವಂತೆ ಮನವಿ ಮಾಡಿದರು. ಕೊರೊನಾ ಎಂದರೆ ಜನರು ಭಯ ಪಡುವುದು ಬೇಡ. ಅದನ್ನು ಆತ್ಮಸ್ಥೈರ್ಯದಿಂದ ಹೋಗಲಾಡಿಸಬೇಕೆಂದರಲ್ಲದೇ, ಕೊರೊನಾ ಮಾರ್ಗ ಸೂಚಿಗಳನ್ನು ಅನುಸರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಿಪಿಐ ದೇವರಾಜ್, ಪಿಎಸ್ಐ ತಿಪ್ಪೇಸ್ವಾಮಿ, ಪ.ಪಂ. ಮುಖ್ಯಾಧಿಕಾರಿ ಎಸ್.ಆರ್.ವೀರಭದ್ರಯ್ಯ, ಆರೋಗ್ಯಾಧಿಕಾರಿ ನಾಗೇಶ್, ಕಂದಾಯಾಧಿಕಾರಿ ರಾಮಚಂದ್ರಪ್ಪ ಸೇರಿದಂತೆ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

# ಹರಿಹರ: 10 ಪಾಸಿಟಿವ್

**(1ನೇ ಪುಟದಿಂದ)** ಜನರಲ್ಲಿ ಇಂದು ಒಂದು ಮಗು ಮತ್ತು ಗರ್ಭಿಣಿ ಮಹಿಳೆ ಸೇರಿದಂತೆ ಮೂವರನ್ನು ಬಿಡುಗಡೆ ಮಾಡಲಾಗಿದೆ. ನಾಳೆಯಿಂದ ನಗರದಲ್ಲಿ 3 ವಿಭಾಗದಲ್ಲಿ ಕೊರೊನಾ ರೋಗಕ್ಕೆ ಚಿಕಿತ್ಸೆ ನೀಡಲು ಆರಂಭಿಸಲಾಗುತ್ತದೆ.

ನಗರದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಡೆಲಿಟೇಡ್ ಹೆಲ್ತ್ ಸೆಂಟರ್ ಕೊರೊನಾ ರೋಗದ ಜೊತೆಗೆ ಇತರೆ ರೋಗದ ಬಾಧೆ ಇರುವಂಥ ವ್ಯಕ್ತಿಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಗುತ್ತೂರು ಹಾಸ್ಟೆಲ್ ಆವರಣದಲ್ಲಿ ಕೋವಿಡ್ ಕೇರ್ ಸೆಂಟರ್‌ನಲ್ಲಿ ರೋಗ ಲಕ್ಷಣಗಳು ಕಡಿಮೆ ಪ್ರಮಾಣದಲ್ಲಿ ಇರುವಂತಹ ವ್ಯಕ್ತಿಗಳಿಗೆ ಇಲ್ಲಿ ಚಿಕಿತ್ಸೆ ಭರಿಸಲಾಗುತ್ತದೆ. ಇದರಲ್ಲಿ ಗುಣವಾಗಿದೇ ಇರುವವರನ್ನು ದಾವಣಗೆರೆ ಸಿ.ಜಿ. ಆಸ್ಪತ್ರೆಗೆ ರವಾನಿಸಲಾಗುತ್ತದೆ ಎಂದು ಹೇಳಿದರು.

ನಗರದಲ್ಲಿ ದಿನದಿಂದ ದಿನಕ್ಕೆ ಕೊರೊನಾ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿರುವುದರಿಂದ ಸಾರ್ವಜನಿಕರು ಭಯದಿಂದ ಜೀವನ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅಧಿಕಾರಿಗಳು ಗಂಟೆಗೆ ಒಂದು ಕಾನೂನು ತಂದು ಹೇಳಿಕೆಗಳನ್ನು ಬಿಡುಗಡೆ ಮಾಡುವ ಮೂಲಕ ಸಾರ್ವಜನಿಕರೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ.

ಛೇಂಬರ್ ಆಫ್ ಕಾಮರ್ಸ್ ಸಂಸ್ಥೆಯು ಸ್ವಯಂ ಪ್ರೇರಿತರಾಗಿ ಮಧ್ಯಾಹ್ನ 2 ಗಂಟೆಯವರೆಗೆ ಮಾತ್ರ ವ್ಯಾಪಾರ ವಹಿವಾಟು ನಡೆಸಿ ನಂತರದಲ್ಲಿ ಅಂಗಡಿ ಮುಂಗಟ್ಟನ್ನು ಬಂದ್ ಮಾಡುವುದಕ್ಕೆ ಮುಂದಾಗಿದ್ದಾರೆ. ಆದರೆ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಅವರು ನಿನ್ನೆ ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದ್ದಾರೆ ಎಂದು ರಾತ್ರಿ 8ರವರೆಗೆ ಅಂಗಡಿ ಮುಂಗಟ್ಟನ್ನು ತೆರೆದುಕೊಂಡು ವ್ಯಾಪಾರ, ವಹಿವಾಟು ಮಾಡುವುದಕ್ಕೆ ಸೂಚನೆ ನೀಡಿದ್ದಾರೆ.

ಇದರಿಂದ ಸಾರ್ವಜನಿಕರು ಇವರ ಯಾವ ಆದೇಶವನ್ನು ಪಾಲನೆ ಮಾಡಬೇಕು ಎಂದು ತಿಳಿಯಲಾಗದೆ ಗೊಂದಲಕ್ಕೆ ಸಿಲುಕಿದ್ದಾರೆ. ಆದಷ್ಟು ಬೇಗ ಸರ್ವ ಪಕ್ಷಗಳ ಮುಖಂಡರ ಸಭೆಯನ್ನು ಆಯೋಜಿಸಿ ಒಂದು ನಿರ್ದಿಷ್ಟ ತೀರ್ಮಾನ ಕೈಗೊಂಡು ಸಾರ್ವಜನಿಕರಿಗೆ ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಕಲ್ಪಿಸಬೇಕಾಗಿದೆ ಎಂದು ಸಾರ್ವಜನಿಕರ ಅಭಿಪ್ರಾಯವಾಗಿದೆ.

# ಸಚಿನ್ ಪೈಲಟ್ ಬಂಡಾಯ

**(1ನೇ ಪುಟದಿಂದ)** ಪತ್ರಿಕಾಗೋಷ್ಠಿ ಮೂಲಕ ಹೇಳಿಕೆ ನೀಡಿದ್ದು, ನಾವು ಪಕ್ಷದ ಶಿಸ್ತಿನ ಸಿಪಾಯಿಗಳು ಎಂದಿದ್ದಾರೆ.

ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ಪೈಲಟ್ ಯತ್ನ ನಡೆಸಿದ್ದಾರೆ ಎಂದು ಗೆಹ್ಲೋಟ್ ಆರೋಪಿಸುತ್ತಿದ್ದಾರೆ. ಇದರ ಭಾಗವಾಗಿ ಪೊಲೀಸರು ಪೈಲಟ್‌ಗೆ ನೋಟಿಸ್ ಕಲಿಸಿದ್ದಾರೆ ಎಂದು ಅವರ ಬೆಂಬಲಿಗರು ಆರೋಪಿಸಿದ್ದಾರೆ.

ರಾಜಸ್ಥಾನ ಸರ್ಕಾರ ಪತನಗೊಳಿಸಲು ಯತ್ನ ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು. ಈ ಬಗ್ಗೆ ಪೊಲೀಸರಲ್ಲಿ ದೂರು ದಾಖಲಾದ ನಂತರ ವಿಶೇಷ ಕಾರ್ಯಾಚರಣೆ ಗುಂಪು (ಎಸ್.ಒ.ಜಿ.) ಪೈಲಟ್‌ಗೆ ನೋಟಿಸ್ ಕಳಿಸಿ ಹೇಳಿಕೆ ನೀಡಲು ಬರುವಂತೆ ತಿಳಿಸಿತ್ತು.

ನೋಟಿಸ್ ಅನ್ನು ಗೆಹ್ಲೋಟ್, ಮುಖ್ಯ ಸಚೇತಕ ಮಹೇಶ್ ಜೋಷಿ ಹಾಗೂ ಇತರೆ ಕೆಲ ಶಾಸಕರಿಗೆ ಕಳಿಸಲಾಗಿದೆ. ಆದರೆ, ಪೈಲಟ್ ಗುರಿ ಮಾಡಿಕೊಂಡೇ ನೋಟಿಸ್ ಕಳಿಸಲಾಗಿದೆ. ಗೆಹ್ಲೋಟ್ ಮತ್ತಿತರರಿಗೆ ನೋಟಿಸ್ ಕಳಿಸಿರುವುದು ನೆಪ ಮಾತ್ರಕ್ಕೆ ಎಂದು ಡಿಸಿಎಂ ನಿಕಟವರ್ತಿಗಳು ಹೇಳುತ್ತಿದ್ದಾರೆ.

ಈ ನಡುವೆ, ಬಲ ಪ್ರದರ್ಶನಕ್ಕೆ ಮುಂದಾಗಿರುವ ಗೆಹ್ಲೋಟ್, ಭಾನುವಾರ ಕಾಂಗ್ರೆಸ್ ಶಾಸಕರ ಸಭೆ ಕರೆದಿದ್ದಾರೆ. ಇದಕ್ಕೆ ಸರ್ಕಾರ ಬಂಬಲಿಸುತ್ತಿರುವ ಸ್ವತಂತ್ರ ಶಾಸಕರಿಗೂ ಆಹ್ವಾನ ನೀಡಲಾಗಿದೆ.

ಸರ್ಕಾರ ಪತನಗೊಳಿಸಲು ಯತ್ನ ನಡೆಸುತ್ತಿರುವುದರ ಹಿಂದೆ ಬಿಜೆಪಿ ಪಾತ್ರವಿದೆ ಎಂದು ಗೆಹ್ಲೋಟ್ ಆರೋಪಿಸಿರುವುದನ್ನು ಕೇಸರಿ ಪಕ್ಷ ತಳ್ಳಿ ಹಾಕಿದೆ.

ಗೆಹ್ಲೋಟ್ ಹಾಗೂ ಪೈಲಟ್ ನಡುವಿನ ಸಂಘರ್ಷದಿಂದಾಗಿ ಕಾಂಗ್ರೆಸ್ ಪಕ್ಷದಲ್ಲಿ ಬಿಕ್ಕಟ್ಟು ಉಂಟಾಗಿದೆ ಎಂದು ಬಿಜೆಪಿ ತಿಳಿಸಿದೆ. ಈ ನಡುವೆ ಹೇಳಿಕೆ ನೀಡಿರುವ ಸ್ವತಂತ್ರ ಶಾಸಕ ಬಾಬುಲಾಲ್ ನಗರ್, ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ನಾಯಕತ್ವದಲ್ಲಿ ನಂಬಿಕೆ ಇದೆ. ಅವರ ಜೊತೆಗಿದ್ದೇವೆ ಎಂದಿದ್ದಾರೆ.

ರಾಜಸ್ಥಾನದಲ್ಲಿ 200 ಶಾಸಕರಿದ್ದಾರೆ. ಕಾಂಗ್ರೆಸ್ 106 ಶಾಸಕರನ್ನು ಹೊಂದಿದೆ. 12 ಸ್ವತಂತ್ರ ಶಾಸಕರು ಸರ್ಕಾರವನ್ನು ಬೆಂಬಲಿಸುತ್ತಿದ್ದಾರೆ. ಆರ್.ಜೆ.ಡಿ.ಯ ಒಬ್ಬ ಹಾಗೂ ಸಿಪಿಐ (ಎಂ)ನ ಇಬ್ಬರು ಶಾಸಕರು ಹೊರಗಿನಿಂದ ಬೆಂಬಲ ನೀಡುತ್ತಿದ್ದಾರೆ. ಮತ್ತೊಂದೆಡೆ ಬಿಜೆಪಿ 72 ಶಾಸಕರನ್ನು ಹೊಂದಿದೆ ಹಾಗೂ ಮಿತ್ರ ಪಕ್ಷವಾದ ಆರ್.ಎಲ್.ಪಿ.ಯಲ್ಲಿ ಮೂವರು ಶಾಸಕರಿದ್ದಾರೆ.

# ಒಂದೇ ದಿನ 66 ಜನರು ಗುಣಮುಖ

**(1ನೇ ಪುಟದಿಂದ)** ಅಹಮದ್ ನಗರ, ಸಿದ್ದವೀರಪ್ಪ ಬಡಾವಣೆ, ಕುವೆಂಪು ನಗರ, ಭರತ್ ಮಿಲ್ ಕಾಂಪೌಂಡ್, ದೊಡ್ಡಬಾತಿಗಳಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ತಾಲ್ಲೂಕಿನಲ್ಲಿ ಒಟ್ಟು 14 ಪ್ರಕರಣಗಳು ಕಂಡು ಬಂದಿವೆ.

ಹರಿಹರದಲ್ಲಿ ಎರಡು ಕೊರೊನಾ ಪ್ರಕರಣಗಳು ಕಂಡು ಬಂದಿವೆ.

ಜಗಳೂರಿನಲ್ಲಿ ಎರಡು ಮತ್ತು ಹೊನ್ನಾಳಿ ತಾಲ್ಲೂಕಿನ ಚಿನ್ನಿಕಟ್ಟೆ, ಬಿದರಹಳ್ಳಿಗಳಲ್ಲಿ ತಲಾ ಒಂದು ಸೋಂಕು ಪ್ರಕರಣ ಕಂಡು ಬಂದಿದೆ.




# ನಗರದಲ್ಲಿಂದು ಎಐವೈಎಫ್ ಪ್ರತಿಭಟನೆ

ಅಖಿಲ ಭಾರತ ಯುವ ಜನ ಫೆಡರೇಷನ್ (ಎಐವೈಎಫ್) ಜಿಲ್ಲಾ ಸಮಿತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ಇಂದು ಬೆಳಿಗ್ಗೆ 10.30ಕ್ಕೆ ಉಪವಿಭಾಗಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟಿಸಿ, ಮನವಿ ಪತ್ರ ಸಲ್ಲಿಸಲಾಗುವುದು ಎಂದು ಸಮಿತಿಯ ಮುಖಂಡ ಆವರಗೆರೆ ವಾಸು ತಿಳಿಸಿದ್ದಾರೆ.

# ವೈದ್ಯ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ: ಹೋರಾಟಕ್ಕೆ ಕರವೇ ಬೆಂಬಲ



ದಾವಣಗೆರೆ, ಜು.12- ಸ್ಥಳೀಯ ವೈದ್ಯಕೀಯ ಕಾಲೇಜು ಗೃಹ ವೈದ್ಯರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಶಿಷ್ಯ ವೇತನಕ್ಕಾಗಿ ಹೋರಾಟ ನಡೆಸುತ್ತಿದ್ದು, ಈ ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದಿಂದ ಬೆಂಬಲ ನೀಡಿದೆ ಎಂದು ವೇದಿಕೆ ತಿಳಿಸಿದೆ.

ವೈದ್ಯರು ಕೊರೊನಾ ವಿರುದ್ಧ ಸೈನಿಕರಂತೆ ಸೆಣಸಾಡುತ್ತಿದ್ದಾರೆ. ಹಗಲು, ರಾತ್ರಿಯೆನ್ನದೆ ಪ್ರಾಣವನ್ನು ಲೆಕ್ಕಿಸದೆ ಸೇವೆ ಸಲ್ಲಿಸುತ್ತಿರುವ ಗೃಹ ವೈದ್ಯರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೂಡಲೇ ಸರ್ಕಾರ, ಮುಖ್ಯಮಂತ್ರಿಗಳು ಶಿಷ್ಯ ವೇತನ ನೀಡಬೇಕು. ಅಲ್ಲದೆ ಇವರ ಸೇವೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿ, ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಂಸದ ಜಿ.ಎಂ. ಸಿದ್ಧೇಶ್ವರ ಹಾಗೂ ಜಿಲ್ಲಾಧಿಕಾರಿಗಳಿಗೆ ಕರವೇ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಯುವ ಘಟಕದ ಜಿಲ್ಲಾಧ್ಯಕ್ಷ ಎಸ್. ಶ್ರೇಯಸ್, ನಾಗರಾಜ್ ಗೌಡ, ನಾಗರಾಜ ಆದಾಪುರ, ಎಚ್.ಎಂ. ರಾಜೇಶ್, ಅಮರ್ ಜೆ. ಮೊಹಿಯುದ್ದೀನ್, ರಾಮಣ್ಣ ತೆಲಗಿ, ಎಂ.ಡಿ. ಹನೀಫ್, ಖಾಜಿ ನಜೀರ್, ಶಿವಣ್ಣ, ಎನ್. ಸಂತೋಷ್, ಸಂತೋಷ್ ಅಂಗಡಿ ಇನ್ನಿತರರು ಹಾಜರಿದ್ದರು.

# ರಷ್ಯಾದಿಂದ ತಾಯ್ನಾಡಿಗೆ ವಾಪಸ್ಸಾಗಲಿರುವ ವಿದ್ಯಾರ್ಥಿಗಳು

ದಾವಣಗೆರೆ, ಜು.12- ಕೋವಿಡ್-19 ಕೊರೊನಾ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸಂಸದರ ಪ್ರಯತ್ನದಿಂದಾಗಿ ರಷ್ಯಾದಲ್ಲಿ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದ ಕರ್ನಾಟಕದ 110 ವೈದ್ಯಕೀಯ ವಿದ್ಯಾರ್ಥಿಗಳು ನಾಳೆ ದಿನಾಂಕ 12ರ ಸೋಮವಾರ ವಿಶೇಷ ವಿಮಾನದ ಮೂಲಕ ತಾಯ್ನಾಡಿಗೆ ಮರಳಲಿದ್ದಾರೆ.

ತಾಯ್ನಾಡಿಗೆ ಬರಲು ಅವಕಾಶ ಕೋರಿ ಫೇಸ್‌ಬುಕ್ ಹಾಗೂ ಟ್ವಿಟ್ಟರ್ ಮೂಲಕ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರಿಗೆ ಮನವಿ ಮಾಡಿಕೊಳ್ಳಲಾಗಿತ್ತು. ಸಂಸದರು ವಿದೇಶಾಂಗ ಸಚಿವರಾದ ಜೈಶಂಕರ್, ವಿಮಾನಯಾನ ಸಚಿವ ಹರಿದ್ವೀಪ್ ಸಿಂಗ್ ಅವರಿಗೆ ಪತ್ರ ಬರೆದು ಗಮನ ಸೆಳೆದಿದ್ದರು.

ಮನವಿಗೆ ಸ್ಪಂದಿಸಿದ ಸಚಿವದ್ವಯರು ಜು.13 ರಂದು ಮಾಸ್ಕೋದಿಂದ ಬೆಂಗಳೂರಿಗೆ ಬರಲು ವಿಶೇಷ ವಿಮಾನ ವ್ಯವಸ್ಥೆ ಮಾಡಿದ್ದಾರೆ. ಈ 110 ವೈದ್ಯಕೀಯ ವಿದ್ಯಾರ್ಥಿಗಳ ಸಮೂಹದಲ್ಲಿ 11 ಜನರು ದಾವಣಗೆರೆ ಜಿಲ್ಲೆಯವರಿದ್ದಾರೆ ಎಂಬುದು ಗಮನಾರ್ಹ.

# ಅತಿಥಿ ಉಪನ್ಯಾಸಕರು, ಶಿಕ್ಷಕರ ವೇತನಕ್ಕೆ ಎಐವೈಎಫ್ ಆಗ್ರಹ

ದಾವಣಗೆರೆ, ಜು.12- ರಾಜ್ಯದಲ್ಲಿ ಸಾವಿರಾರು ಅತಿಥಿ ಉಪನ್ಯಾಸಕರು ಮತ್ತು ಅತಿಥಿ ಶಿಕ್ಷಕರು ದುಡಿಯುತ್ತಿದ್ದು, ವೇತನವಿಲ್ಲದೆ ಕಷ್ಟಪಡುತ್ತಿದ್ದು, ಕೂಡಲೇ ಬಾಕಿ ವೇತನವನ್ನು ಬಿಡುಗಡೆ ಮಾಡಬೇಕು ಹಾಗೂ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸುವಂತೆ ಕರ್ನಾಟಕ ರಾಜ್ಯ ಅತಿಥಿ ಉಪನ್ಯಾಸಕರು, ಅತಿಥಿಶಿಕ್ಷಕರ ಹೋರಾಟ ಸಮಿತಿ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗ್‌ನೈಸೇಷನ್ (ಎಐಡಿವೈಓ) ಆಗ್ರಹಿಸಿದೆ.

ಲಾಕ್‌ಡೌನ್‌ನಿಂದ ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕರ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಒಂದು ತಿಂಗಳಲ್ಲಿ ಆತ್ಮಹತ್ಯಾ ಪ್ರಕರಣಗಳು ನಡೆದು, ಶಿಕ್ಷಕರ ಕುಟುಂಬ ಬೀದಿ ಪಾಲಾಗಿದೆ. ಕೂಡಲೇ ಬಾಕಿ ವೇತನ ಬಿಡುಗಡೆಗೊಳಿಸಬೇಕು. ವಿವಿಧ ಕ್ಷೇತ್ರಗಳಿಗೆ ಸರ್ಕಾರ ಪರಿಹಾರ ನೀಡಿರುವಂತೆ ಅತಿಥಿ ಉಪನ್ಯಾಸಕರು ಮತ್ತು ಅತಿಥಿ ಶಿಕ್ಷಕ ವೃಂದದವರಿಗೂ ಸಹ ಕನಿಷ್ಟ ಪಕ್ಷ ಒಂದು ಬಾರಿಯ ಪರಿಹಾರ ಪ್ಯಾಕೇಜ್ ಅನ್ನು ಘೋಷಿಸಬೇಕು.


ಖಾಲಿ ಇರುವ ಹುದ್ದೆಗಳಿಗೆ ಶಿಕ್ಷಕರು ಮತ್ತು ಉಪನ್ಯಾಸಕರನ್ನು ನೇಮಿಸುವ ಪ್ರಕ್ರಿಯೆಯನ್ನು ನಡೆಸಬೇಕು ಹಾಗೂ ಇಲ್ಲಿಯವರೆಗೂ ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರು ಹಾಗೂ ಶಿಕ್ಷಕರನ್ನು ಖಾಯಂಗೊಳಿಸಬೇಕೆಂದು ಸಮಿತಿ ಹಾಗೂ ಎಐಡಿವೈಓ ಒತ್ತಾಯಿಸುತ್ತಿದೆ ಎಂದು ಎಐಡಿವೈಓ ಜಿಲ್ಲಾ ಉಪಾಧ್ಯಕ್ಷ ಮಧು ತೊಗಲೇರಿ ತಿಳಿಸಿದ್ದಾರೆ.

# ಭಾನುವಾರದ ಲಾಕ್‌ಗೆ ನಗರ ಮೌನ

**(1ನೇ ಪುಟದಿಂದ)** ತಿರುಗಾಡುತ್ತಿದ್ದುದು ಕಾಣ ಸಿಕ್ಕಿತ್ತು.

**ಚಿಕನ್-ಮಟನ್ ಅಂಗಡಿಗಳು ರಶ್ :** ನಗರದ ಮಟನ್ ಮಾರ್ಕೆಟ್, ವಿನೋಬನಗರ, ಜಾಲಿ ನಗರ, ಕೆಟಿಜೆ ನಗರ ಮುಖ್ಯ ರಸ್ತೆ ಹಾಗೂ ಹಳೇಭಾಗಗಳಲ್ಲಿ ಚಿಕನ್, ಮಟನ್ ಮಾರಾಟವು ಭಾನುವಾರವಾಗಿದ್ದರ ಪರಿಣಾಮ ಹೆಚ್ಚಾಗಿಯೇ ಇತ್ತು. ಕೆಲವೆಡೆ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಗ್ರಾಹಕರು ಮಟನ್‌ಗಾಗಿ ಮುಗಿ ಬಿದ್ದಿದ್ದರು.

# ನಗರದಲ್ಲಿ ಇಂದು ಶ್ರೀ ಉತ್ಸವಾಂಬ ದೇವಿಗೆ ಮಹಾಮಂಡಲಾಭಿಷೇಕ



ಪಿ. ಹಾಲೇಶಪ್ಪ (ವಸಂತ ರಸ್ತೆ) ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿ ದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 8ನೇ ವರ್ಷದ ಮಹಾಮಂಡಲಾಭಿಷೇಕವು ಇಂದಿನಿಂದ ಬರುವ ಆಗಸ್ಟ್ 19ರವರೆಗಿನ ದೇವರಿಗೆ ಭಕ್ತಾದಿಗಳಿಂದ ಮಹಾಭಿಷೇಕವಿರುತ್ತದೆ. ಕೊನೆಯ ದಿನದಂದು ಬೆಳಗಿನ ಜಾವದಿಂದ ತಾಯಿಗೆ ಮಹಾಪೂಜೆ ಹಾಗೂ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗವಿರುತ್ತದೆ.

# ವರದಿಯಿಂದ ಪರಿಹಾರವೂ ಇಲ್ಲ

**(1ನೇ ಪುಟದಿಂದ)** ಭಯಾನಾ ಅವರು ಸಾವನ್ನಪ್ಪಿದ್ದರು. ಅವರಲ್ಲಿ ಕೊರೊನಾ ರೀತಿಯ ಲಕ್ಷಣಗಳಿದ್ದವು. ಅವರ ಮರಣೋತ್ತರ ಪರೀಕ್ಷೆಯಲ್ಲೂ ಕೊರಾನಾದ ಇಂಗಿತ ವ್ಯಕ್ತವಾಗಿತ್ತು.ಆದರೆ, ಅವರಿಗೆ ನಡೆಸಲಾದ ಪರೀಕ್ಷೆಗಳು ನೆಗೆಟಿವ್ ಬಂದಿದ್ದವು ಎಂದು ಎಐಐಎಂಎಸ್‌ನ ನಿವಾಸಿ ವೈದ್ಯರ ಒಕ್ಕೂಟ ಹೇಳಿದೆ.

ಕೊರೊನಾ ವಾರಿಯರ್‌ಗಳಿಗೆ ಪರಿಹಾರವನ್ನು ನಿರ್ಧರಿಸುವ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕೇವಲ ಮೈಕ್ರೋಬಯಾಲಜಿಕಲ್ ವರದಿಗಳನ್ನು ಅವಲಂಬಿಸಬಾರದು ಎಂದು ಎಐಐಎಂಎಸ್‌ನ ಗೆರಿಯಾಟ್ರಿಕ್ ಮೆಡಿಸಿನ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಡಾ. ವಿಜಯ್ ಗುರ್ಜಾರ್ ಹೇಳಿದ್ದಾರೆ.

ಚಿಕಿತ್ಸೆಯ ಇತರೆ ಮಾಹಿತಿಗಳನ್ನು ಕಡೆಗಣಿಸಬಾರದು. ಕೊರೊನಾ ಬಗ್ಗೆ ಸಮಗ್ರ ನಿಲುವು ತಳೆಯಬೇಕು ಎಂದೂ ಅವರು ತಿಳಿಸಿದ್ದಾರೆ.

# ಐಶ್ವರ್ಯ, ಪುತ್ರಿ ಆರಾಧ್ಯಗೆ ಸೋಂಕು

**(1ನೇ ಪುಟದಿಂದ)** ಮಗ ಅಭಿಷೇಕ್ ಬಚ್ಚನ್‌ಗೆ ಸೋಂಕಿರುವುದು ಕಂಡು ಬಂದಿತ್ತು. ಅಮಿತಾಬ್ ಪತ್ನಿ ಜಯಾ ಬಚ್ಚನ್ ವರದಿ ನೆಗೆಟಿವ್ ಬಂದಿತ್ತು. ಈ ನಡುವೆ, ಅನುಪಮ್ ಖೇರ್ ತಾಯಿ ದುಲಾರಿ ಹಾಗೂ ಸಹೋದರ ರಾಜುಗೆ ಸೋಂಕಿರುವುದು ಕಂಡು ಬಂದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಖೇರ್, ನನ್ನ ತಾಯಿ ಕೆಲ ದಿನಗಳಿಂದ ಆಹಾರ ಸೇವಿಸುತ್ತಿರಲಿಲ್ಲ. ರಕ್ತ ಪರೀಕ್ಷೆ ಮಾಡಿಸಲಾಗಿತ್ತು. ಸಿ.ಟಿ. ಸ್ಕ್ಯಾನ್ ಮಾಡಿಸಿದಾಗ ಕೊರೊನಾಪಾಸಿಟಿವ್ ಕಂಡು ಬಂದಿದೆ ಎಂದು ಹೇಳಿದ್ದಾರೆ. ಸಹೋದರ ರಾಜು, ನಾದಿನಿ ಹಾಗೂ ಅವರ ಮಗನಿಗೆ ಪಾಸಿಟಿವ್ ಬಂದಿದೆ. ನನ್ನ ಪರೀಕ್ಷೆ ನೆಗೆಟಿವ್ ಬಂದಿದೆ ಎಂದು ಖೇರ್ ಹೇಳಿದ್ದಾರೆ.

ನಟಿ ರೇಖಾ ಬಂಗಲೆಯ ಭದ್ರತಾ ಸಿಬ್ಬಂದಿಯೊಬ್ಬರಿಗೆ ಕೊರೊನಾ ಪಾಸಿಟಿವ್ ಬಂದಿದೆ.

# ಜಾಮೀನಿಗಾಗಿ ಅಪರಾಧಿಗಳಿಗೆ ನಕಲಿ ಪ್ರಮಾಣ ಪತ್ರ : ವೈದ್ಯನ ಬಂಧನ

ನವದೆಹಲಿ, ಜು. 12 – ಅಪರಾಧಿಗಳು ಜಾಮೀನು ಪಡೆಯಲು ನೆರವಾಗುವ ಸಲುವಾಗಿ ನಕಲಿ ವೈದ್ಯಕೀಯ ಪ್ರಮಾಣ ಪತ್ರ ನೀಡುತ್ತಿದ್ದ 61 ವರ್ಷದ ವೈದ್ಯ ಹಾಗೂ ಆತನ ಸಹಾಯಕನನ್ನು ಪೊಲೀಸರು ಬಂಧಿಸಿದ್ದಾರೆ.

ಉತ್ತಮ್ ನಗರದ ನಿವಾಸಿ ಗಜೇಂದ್ರ ಕುಮಾರ್ ನಯ್ಯರ್‌ನನ್ನು ಬಂಧಿಸಲಾಗಿದ್ದು, ದೆಹಲಿ ವೈದ್ಯಕೀಯ ಮಂಡಳಿ ಆತನನ್ನು ತಾತ್ಕಾಲಿಕವಾಗಿ ಅಮಾನತ್ತುಗೊಳಿಸಿದೆ.

38 ವರ್ಷದ ಮುಕೇಶ್ ಸಂಗ್ವನ್ ಎಂಬಾತ ಅತ್ಯಾಚಾರ ಪ್ರಕರಣದಲ್ಲಿ ಸಿಲುಕಿದ್ದು. ಆತ ನಕಲಿ ವೈದ್ಯಕೀಯ ದಾಖಲೆ ಆಧರಿಸಿ ಜಾಮೀನು ಪಡೆಯಲು ನಯ್ಯರ್ ನೆರವಾಗಿದ್ದ. ನಂತರ ಸಂಗ್ವನ್ ನಕಲಿ ಪ್ರಮಾಣ ಪತ್ರಗಳನ್ನು ಪಡೆಯಲು ಅಪರಾಧಿಗಳನ್ನು ಹುಡುಕಿ ತರುತ್ತಿದ್ದ.

# ಯಲವಟ್ಟಿ : ಕೊರೊನಾ ಪಾಸಿಟಿವ್

**(1ನೇ ಪುಟದಿಂದ)** ಹೊಳೆಸಿರಿಗೆರೆಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರೇಖಾ, ಗ್ರಾ.ಪಂ. ಪಿಡಿಒ ರಾಮನಗೌಡ, ಹಿರಿಯ ಆರೋಗ್ಯ ಸಹಾಯಕ ಹೊರಕೇರಿ, ಕಿರಿಯ ಆರೋಗ್ಯ ಸಹಾಯಕಿಯರಾದ ಭಾಗ್ಯಮ್ಮ, ಆರೋಗ್ಯವಾಣಿ, ಆಶಾ ಕಾರ್ಯಕರ್ತೆಯರು, ಕ್ವಾರಂಟೈನ್ ಕುಟುಂಬದವರಿಗೆ ಧೈರ್ಯ ಹೇಳಿ, ಜಾಗೃತಿ ವಹಿಸುವಂತೆ ತಿಳಿಸಿ, ಏರಿಯಾವನ್ನು ಸ್ಯಾನಿಟೈಸ್ ಮಾಡಿಸಿದರು.

# ಸ್ವಚ್ಛ, ಸುಂದರ ಪರಿಸರಕ್ಕಾಗಿ ಸ್ವಚ್ಛತಾ ಅಭಿಯಾನ : ಮೇಯರ್ ಅಜಯ್



ದಾವಣಗೆರೆ, ಜು.12- ನಗರದ ಸ್ವಚ್ಛತೆ ಮತ್ತು ಉತ್ತಮ ಪರಿಸರಕ್ಕಾಗಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 45 ವಾರ್ಡ್‌ಗಳಲ್ಲಿ ಪರಿಸರ ಸೈನಿಕರನ್ನು ನಿಯೋಜಿಸಿ, ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಲಾಗುವುದು ಎಂದು ಪಾಲಿಕೆ ಮಹಾಪೌರರಾದ ಬಿ.ಜಿ.ಅಜಯ್ ಕುಮಾರ್ ಹೇಳಿದರು.

ನಗರದ ಏಳನೇ ವಾರ್ಡಿನ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ನಲ್ಲಿರುವ ಮೈದಾನ ಮತ್ತು ಸುತ್ತಮುತ್ತಲ ಪ್ರದೇಶವನ್ನು ಸ್ವಚ್ಛಗೊಳಿಸಿ, ಸಸಿಗಳನ್ನು ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಪರಿಸರ ಸೈನಿಕರಾಗಿ ಪರಿಸರ ಪ್ರಿಯರು, ಹಿರಿಯ ನಾಗರಿಕರು, ಯುವಕರು, ಸ್ಥಳೀಯ ನಾಗರಿಕರ ಸಮಿತಿ, ಸಂಘ-ಸಂಸ್ಥೆಗಳು ಮತ್ತು ಆಯಾ ವಾರ್ಡಿನ ಪಾಲಿಕೆ ಸದಸ್ಯರು ಪ್ರತಿ ಶನಿವಾರದಂದು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಲಿದ್ದಾರೆ.

ಈ ವೇಳೆ ಪಾಲಿಕೆ ಸದಸ್ಯರಾದ ವಿನಾಯಕ, ಗಾಯತ್ರಿ ಬಾಯಿ ಖಂಡೋಜಿರಾವ್, ಹೆಚ್.ಸಿ.ಜಯಮ್ಮ, ಶಿವನಗೌಡ ಪಾಟೀಲ್, ಮುಖಂಡರುಗಳಾದ ಗಿರೀಶ್ ದೇವರಮನೆ, ಶಿವಕುಮಾರ್, ಗೋಪಾಲ್‌ರಾವ್, ಚೇತನಾ ಶಿವಕುಮಾರ್, ಅಧಿಕಾರಿಗಳು ಮತ್ತು ಪೌರ ಕಾರ್ಮಿಕರು ಇತರರಿದ್ದರು.

# ಜನರು ಜಾಗೃತರಾದರೆ ಮಾತ್ರ ಕೊರೊನಾ ನಿಯಂತ್ರಣ ಸಾಧ್ಯ

## ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯ ತಂಡದಲ್ಲಿರುವ ಡಾ. ಇ.ಎಂ.ಸುರೇಂದ್ರ

**ಜಿಗಳಿ ಪ್ರಕಾಶ್**


ಮಲೇಬೆನ್ನೂರು, ಜು.12- ಕಳೆದ 3-4 ತಿಂಗಳುಗಳಿಂದ ಮಹಾಮಾರಿ ಸಾಂಕ್ರಾಮಿಕ ರೋಗವಾಗಿರುವ ಕೊರೊನಾ ವೈರಸ್ ನಿಯಂತ್ರಣಕ್ಕಾಗಿ ದಾವಣಗೆರೆ ಜಿಲ್ಲಾಡಳಿತ ಹಾಗೂ ವೈದ್ಯರು, ಶುಶ್ರೂಷಕರು, ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆಯವರು, ಪೌರ ಕಾರ್ಮಿಕರು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಇವರೆಲ್ಲರೂ ಹಗಲು-ರಾತ್ರಿ ಎನ್ನದೇ ಮನೆಯನ್ನು ತೊರೆದು, ತಮ್ಮ ಜೀವವನ್ನು ಒತ್ತೆಯಿಟ್ಟು ಜನರ ಆರೋಗ್ಯ ಕಾಪಾಡಲು ಕೆಲಸ ಮಾಡುತ್ತಿದ್ದಾರೆ. ಆದರೆ, ಸಾರ್ವಜನಿಕ ರಾದ ನಾವು ಮಾತ್ರ ಕೊರೊನಾ ಸೋಂಕಿಗೂ ನಮಗೂ ಸಂಬಂಧವೇ ಇಲ್ಲವೆಂಬಂತೆ ನಿರ್ಲಕ್ಷ್ಯ ವಹಿಸಿದ್ದೇವೆ.

ಜನರ ನಿರ್ಲಕ್ಷ್ಯ ಕುರಿತು ದಾವಣಗೆರೆ ಸಿ.ಜಿ ಆಸ್ಪತ್ರೆಯಲ್ಲಿ (ಕೋವಿಡ್ ಆಸ್ಪತ್ರೆ) ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ತಂಡದಲ್ಲಿರುವ ನುರಿತ ತಜ್ಞ ವೈದ್ಯರಾದ ನಿಟ್ಟೂರಿನ ಡಾ. ಇ.ಎಂ. ಸುರೇಂದ್ರ ಅವರು ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು ಹಂಚಿಕೊಂಡಿದ್ದಾರೆ.

ಹೆಮ್ಮಾರಿ ಕೊರೊನಾ ವೈರಸ್ ನಮ್ಮ ದೇಶ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಮಾಡಿರುವ ಅವಾಂತರಗಳನ್ನು ನೋಡಿದ್ದರೂ ಜನ ಮಾತ್ರ ಇನ್ನೂ ಜಾಗೃತರಾಗದಿರುವುದು ತುಂಬಾ ಬೇಸರ ತಂದಿದೆ. ಇದುವರೆಗೂ ನಾವು-ನೀವೆಲ್ಲರೂ ಅನೇಕ ಮಾರಕ ರೋಗಗಳನ್ನು ನೋಡಿದ್ದೇವೆ. ಆದರೆ, ಈ ಸೋಂಕು ಮಾತ್ರ ಆ ಎಲ್ಲಾ ರೋಗಗಳನ್ನು ಮೀರಿಸಿದೆ ಎಂದರೆ ತಪ್ಪಾಗಲಾರದು.

ಒಬ್ಬರಿಂದ ಮತ್ತೊಬ್ಬರಿಗೆ ಬಹಳ ಬೇಗ ಹರಡುವ ಈ ಕಾಯಿಲೆಗೆ ಇದುವರೆಗೂ ಲಸಿಕೆ ಸಿಕ್ಕಿಲ್ಲ. ಆದರೂ ನಮ್ಮ ಜನ ಮಾತ್ರ ನಮಗೆ ಏನೂ ಆಗಲ್ಲ. ಅವರು ನಮ್ಮ ಆತ್ಮೀಯರೆಂದು ಜೊತೆಯಲ್ಲೇ ಬೇರೆಯುತ್ತಾರೆ. ಅಂತರ ಕಾಯ್ದುಕೊಳ್ಳುವುದಿಲ್ಲ. ಕಡ್ಡಾಯವಾಗಿ ಮಾಸ್ಕ್ ಬಳಸುತ್ತಿಲ್ಲ.



ಆಗಾಗ ಕೈಗಳಿಗೆ ಸ್ಯಾನಿಟೈಸ್ ಅಥವಾ ಸಾಬೂನು ಬಳಸಿ ಕೈ ತೊಳೆಯುತ್ತಿಲ್ಲ, ಜನರು ವಹಿಸುವ ಈ ನಿರ್ಲಕ್ಷ್ಯದಿಂದ ಅವರೊಬ್ಬರಿಗೆ ಮಾತ್ರ ತೊಂದರೆ ಆಗುವುದಿಲ್ಲ. ಇಡೀ ಕುಟುಂಬ ಮತ್ತು ಆತ ಸಂಪರ್ಕ ಬಳಸಿದ ಎಲ್ಲರಿಗೂ ಸೋಂಕು ಹರಡುತ್ತದೆ ಎಂಬ ಅರಿವು ಇರಬೇಕು. ಇಲ್ಲದಿದ್ದರೆ ಮುಂದೊಂದು ದಿನ ನಿಮಗೆ ಚಿಕಿತ್ಸೆ ಕೊಡಲು ವೈದ್ಯರು, ಸೇವೆ ಮಾಡಲು ಶುಶ್ರೂಷಕರು ಸಿಗಲ್ಲ. ಮಲಗಲು ಬೆಡ್ ಸಿಗಲ್ಲ. ಅಂತಹ ಪರಿಸ್ಥಿತಿ ನಿರ್ಮಾಣ ವಾದರೂ ಆಶ್ಚರ್ಯವಿಲ್ಲ ಎಂಬುದನ್ನು ಜನ ಅರ್ಥ ಮಾಡಿಕೊಳ್ಳ ಬೇಕೆಂದು ಸುರೇಂದ್ರ ಎಚ್ಚರಿಸಿದ್ದಾರೆ.

**ನಿಯಂತ್ರಣ ಹೇಗೆ ಸಾಧ್ಯ :** ಪ್ರತಿಯೊಬ್ಬರೂ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದರಿಂದ ಮತ್ತು ಕೈಗಳನ್ನು ಸ್ಯಾನಿಟೈಸ್ ಮಾಡುವುದರಿಂದ ಸೋಂಕಿತ ವ್ಯಕ್ತಿ ನಮ್ಮ ಜೊತೆ ಇದ್ದರೂ ಸೋಂಕು ಹರಡದಂತೆ ತಡೆಗಟ್ಟಬಹುದು.

ಕನಿಷ್ಟ 2 ಮೀಟರ್ ದೂರದಲ್ಲಿ ನಿಂತು ಮಾತನಾಡಬೇಕು. ಅನವಶ್ಯಕವಾಗಿ ಮನೆಯಿಂದ ಹೊರಗೆ ಬರಬಾರದು. ಪ್ರಯಾಣ ಮಾಡಬಾರದು, ಸಭೆ-ಸಮಾರಂಭ, ಮದುವೆಗಳಿಗೆ ಹೋಗಬಾರದು. ಅನಿವಾರ್ಯತೆ ಇದ್ದರೆ ಜಾಗೃತಿ ವಹಿಸಿ, ಮೇಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

**ನಿಮ್ಮ ಜೀವ ನಿಮ್ಮ ಕೈಯಲ್ಲಿ :** ಸದ್ಯದ ಪರಿಸ್ಥಿತಿಯಲ್ಲಿ ಜನರಾಗಲೀ, ಕೊರೊನಾ ವಾರಿಯರ್ಸ್‌ಗಳಾಗಲೀ ಕೊರೊನಾ ಸೋಂಕಿನ ಬಗ್ಗೆ ಅಸಡ್ಡೆ ತೋರಿದರೆ, ಅಪಾಯ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ, ನೂರು ವರ್ಷ ಆಯಸ್ಸು ಎಂಬಂತೆ ಈಗ ಬಂದಿರುವ ಕೊರೊನಾ ಎಂಬ ಸಂಕಷ್ಟದಿಂದ ನಾವೆಲ್ಲರೂ ಪಾರಾಗಬೇಕೆಂದರೆ, ಜಾಗೃತಿ, ಅರಿವು ಬಹಳ ಮುಖ್ಯವಾಗಿದೆ. ನಮ್ಮ ಜೀವ ನಮ್ಮ ಕೈಯ್ಯಲ್ಲಿದೆ. ಅದನ್ನು ಉಳಿಸುವುದು, ಬಿಡುವುದು ನಮಗೆ ಸೇರಿದೆ.

**ಭಯ ಹುಟ್ಟಿಸಬೇಡಿ :** ವಿಶೇಷವಾಗಿ ಟಿವಿ ಮಾಧ್ಯಮದವರು ಜನರಲ್ಲಿ ಕೊರೊನಾದ ಬಗ್ಗೆ ಭಯ ಹುಟ್ಟಿಸುವಂತಹ ಸುದ್ದಿ ತೋರಿಸುವ ಬದಲಾಗಿ, ಜನರಿಗೆ ಅರಿವು ಮೂಡಿಸುವ ಸುದ್ದಿಗಳನ್ನು ತೋರಿಸಿ ಜಾಗೃತಿ ತರಬೇಕೆಂದು ಡಾ. ಸುರೇಂದ್ರ ಮನವಿ ಮಾಡಿದ್ದಾರೆ.

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ಶ್ರೀ ಉದಯಕುಮಾರ್ ಅಂಬಿಗೇರ ಬಿನ್ ಬಸವರಾಜ ಇವರು ಕೆಳಕಂಡ ಷೆಡ್ಯೂಲ್ ನಲ್ಲಿ ವಿವರಿಸಿರುವ ಸ್ವತ್ತನ್ನು ಮಾಲೀಕರಾದ ದಾವಣಗೆರೆ ಸಿಟಿ, ಎಂ.ಸಿ.ಸಿ. 'ಎ' ಬ್ಲಾಕ್, ರಾಮಕೃಷ್ಣ ಆಶ್ರಮದ ಪಕ್ಕ, ಮನೆ ನಂ. 2533/3 ರಲ್ಲಿ ವಾಸವಿರುವ ಶ್ರೀ ಗಿರಿಪ್ರಸಾದ್ ಎಂ.ಕೆ., ಶ್ರೀ ಸತೀಶ್ ಎಂ.ಕೆ., ಬಿನ್ ಕೊಟ್ರಪ್ಪ ಇವರಿಂದ ಕ್ರಯ ಪಡೆದುಕೊಳ್ಳಲು ಇಚ್ಛಿಸಿದ್ದು, ದಿನಾಂಕ 15.06.2020ರಂದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕರಾದ ಗಿರಿಪ್ರಸಾದ್ ಮತ್ತು ಸತೀಶ್ ಇವರಿಂದ ಕ್ರಯದ ಕರಾರು ಪತ್ರ ಮಾಡಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾರದೇ ಹಕ್ಕು / ಹಿತಾಸಕ್ತಿಗಳಿದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ 7 ದಿನಗಳೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ.

ದಾವಣಗೆರೆ ಸಿಟಿ, 2ನೇ ಡಿವಿಜನ್, 21ನೇ ವಾರ್ಡ್, ವಿಜಯ ನಗರ ಬಡಾವಣೆಯಲ್ಲಿರುವ ಸೈಟ್ ನಂ. 5, ಮನೆ ನಂ. 1303/5, ಅಳತೆ : 40x30 ಅಡಿ.

**ಎ. ರವಿಕುಮಾರ್,** ವಕೀಲರು, 18ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ. ಮೊ. 98453-30045

# ತಮಿಳುನಾಡು ಅಂಧ ದಂಪತಿ ಉಳಿಸಿದ್ದು ರದ್ದಾದ ನೋಟುಗಳು

ಈರೋಡ್ (ತಮಿಳುನಾಡು), ಜು. 12 – ದೃಷ್ಟಿ ವಿಕಲಚೇತನ ದಂಪತಿ ಊದಿನ ಕಡ್ಡಿ ಮಾರಿ 24 ಸಾವಿರ ರೂ.ಗಳ ಹಣ ಉಳಿಸಿದ್ದಾರೆ. ಆದರೆ, ಇವು ನಾಲ್ಕು ವರ್ಷಗಳ ಹಿಂದೆಯೇ ಅಮಾನ್ಯೀಕರಣವಾದ 1,000 ರೂ. ಹಾಗೂ 500 ರೂ.ಗಳ ಮುಖ ಬೆಲೆಯವು ಎಂಬುದನ್ನು ತಿಳಿದು ಅವರಿಗೆ ಆಘಾತವಾಗಿದೆ.

ಪೊಥಿಯಾ ಮೂಪನುರೆ ಗ್ರಾಮದ ನಿವಾಸಿಯಾದ 58 ವರ್ಷದ ಸೋಮು ಹಾಗೂ ಪತ್ನಿ ಪಳನಿಯಮ್ಮಾಳ್ ಕಳೆದ ಶುಕ್ರವಾರದಂದು ಉಳಿತಾಯ ಖಾತೆಗೆ ಹಣ ಜಮಾ ಮಾಡಲು ತೆರಳಿದರು. ಆಗಷ್ಟೇ ತಮಗೆ ನವೆಂಬರ್, 2016ರಲ್ಲಿ ನೋಟು ರದ್ದಾಗಿತ್ತು ತಿಳಿಯಿತು ಎಂದು ದಂಪತಿ ಹೇಳಿದ್ದಾರೆ. ದಂಪತಿ ತಮ್ಮ ಉಳಿತಾಯದ ಹಣವನ್ನು ಸೋಮುವಿನ ಅನಕ್ಷರಸ್ಥ ತಾಯಿಯ ಬಳಿ ಇರಿಸಿದ್ದರು. ಈ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸಲು ತೆರಳಿದಾಗ, ಬ್ಯಾಂಕಿನ ಅಧಿಕಾರಿಗಳು ನೋಟು ರದ್ದಾಗಿರುವುದನ್ನು ತಿಳಿಸಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ಊದಿನ ಕಡ್ಡಿ ಹಾಗೂ ಕರ್ಪೂರವನ್ನು ಅಂತಿಯೂರು ಮತ್ತಿತರೆ ಪ್ರದೇಶಗಳಲ್ಲಿ ಮಾರಿ ಉಳಿಸಿದ್ದಾಗಿ ಸೋಮು ಹೇಳಿದ್ದಾರೆ.

ಪ್ರತಿ ವಾರ ಅವರು ಉಳಿತಾಯದ ಹಣವನ್ನು ತಮ್ಮ ತಾಯಿಗೆ ನೀಡುತ್ತಿದ್ದರು. ತಾಯಿ ಅದನ್ನು ಎಚ್ಚರಿಕೆಯಿಂದ 500 ರೂ. ಹಾಗೂ 1000 ರೂ.ಗಳಿಗೆ ಪರಿವರ್ತಿಸಿ ಕೂಡಿಡುತ್ತಿದ್ದರು ಎಂದು ಸೋಮು ಹೇಳಿದ್ದಾರೆ.

ತಾವು ಮೂವರಿಗೂ ನೋಟು ರದ್ದಾಗಿರುವುದು ಗೊತ್ತೇ ಇಲ್ಲ ಎಂದಿರುವ ಅವರು, ಕುಟುಂಬದವರಿಗೆ ನೆರವಾಗುವಂತೆ ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರಿಗೆ ಪತ್ರ ಬರೆದಿದ್ದಾರೆ.

ಪೊಲೀಸರು ಈ ಘಟನೆಯ ಬಗ್ಗೆ ತನಿಖೆ ಆರಂಭಿಸಿದ್ದಾರೆ.

ಕಳೆದ ವರ್ಷ ಸಹ ಇದೇ ರೀತಿಯ ಒಂದು ಪ್ರಕರಣ ಬೆಳಕಿಗೆ ಬಂದಿತ್ತು. ತಿರುಪೂರು ಜಿಲ್ಲೆಯ ವೃದ್ಧ ಸಹೋದರಿಯರ ಬಳಿ ರದ್ದಾದ ನೋಟುಗಳ 46 ಸಾವಿರ ರೂ. ಮುಖಬೆಲೆಯ ಹಣ ಪತ್ತೆಯಾಗಿತ್ತು.

ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ. ವಿಜಯಕಾರ್ತಿಕೇಯನ್ ಅವರು 78 ವರ್ಷದ ತಂಗಮ್ಮಾಳ್ ಹಾಗೂ 75 ವರ್ಷದ ರಂಗಮ್ಮಾಳ್ ಅವರಿಗೆ ವೃದ್ಧಾಪ್ಯ ವೇತನದ ವ್ಯವಸ್ಥೆ ಮಾಡಿಕೊಟ್ಟು ನೆರವಾಗಿದ್ದರು.

# ದಿಶಾ ಸಭೆಗೆ ನಾಮ ನಿರ್ದೇಶನ ಸದಸ್ಯರ ನೇಮಕ



ದಾವಣಗೆರೆ, ಜು.12- ಜಿಲ್ಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗೆ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಜಿಲ್ಲೆಯ ನಾಲ್ವರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸಿದೆ.

ಹಿರಿಯ ನಾಗರಿಕರ ಕೋಟಾದಡಿ ಜಿ.ಚಂದ್ರೇಗೌಡ, ಮಹಿಳಾ ಕೋಟಾದಡಿ ಹೆಚ್.ಎಂ. ಆಶಾ, ಶೈಕ್ಷಣಿಕ ವಲಯದಿಂದ ಹೆಚ್.ಕೆ. ಬಸವರಾಜ್, ನಾಗರಿಕ ಹಿತರಕ್ಷಣಾ ಸಮಿತಿ ಕೋಟಾದಡಿ ಜಿ.ಪಿ.ಮುಪ್ಪಣ್ಣ ಅವರನ್ನು ನಾಮ ನಿರ್ದೇಶನ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿರುವ ದಿಶಾ ಸಮಿತಿಯ ಸದಸ್ಯರಾಗಿ ನೇಮಕಗೊಂಡಿರುವ ಚಂದ್ರೇಗೌಡ ಮತ್ತಿತರರು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಪರಿಶೀಲನೆ ನಡೆಸಿ, ನ್ಯೂನತೆಗಳೇನಾದರೂ ಇದ್ದಲ್ಲಿ ಸಮಿತಿ ಸಭೆಯಲ್ಲಿ ಚರ್ಚಿಸುವ ಅಧಿಕಾರ ಹೊಂದಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಕೊರೊನಾ ವೈರಸ್ : ಜನತಾ ಕರ್ಫ್ಯೂಗೆ ಎಲ್ಲೆಡೆ ಸ್ಪಂದನೆ

## ಹೊನ್ನಾಳಿ ತಾಲ್ಲೂಕು ಪೂರ್ಣ ಸ್ತಬ್ಧ



ಹೊನ್ನಾಳಿ, ಜು.12- ತಾಲ್ಲೂಕಿನಲ್ಲಿ ಜನತಾ ಕರ್ಫ್ಯೂಗೆ ಸಾರ್ವಜನಿಕರು, ವರ್ತಕರು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕೊರೊನಾ ವೈರಸ್ ಮಹಾಮಾರಿಯಿಂದ ಪಟ್ಟಣದಲ್ಲಿ ಕಳೆದ ಎರಡು ದಿನಗಳಿಂದ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕೊರೊನಾ ಪೀಡಿತರ ಮನೆಗಳಿಗೆ ಸೀಲ್‌ಡೌನ್ ಮಾಡಿರುವ ಹಿನ್ನೆಲೆಯಲ್ಲಿ ಕೆಲವು ಸಾರ್ವಜನಿಕರು ಹೊರಗೆ ಓಡಾಡದೇ ಭಯಭೀತರಾಗಿ ಮನೆಯಲ್ಲಿಯೇ ಇದ್ದಾರೆ.

ನಿನ್ನೆ ಪಟ್ಟಣ ಪಂಚಾಯ್ತಿ ವಾಹನದಲ್ಲಿ ಭಾನುವಾರ ಸಂಪೂರ್ಣ ಬಂದ್ ಇರುತ್ತದೆ ಎಂಬ ಕರೆಗೆ ಎಲ್ಲಾ ವರ್ತಕರು, ತರಕಾರಿ ವ್ಯಾಪಾರಸ್ಥರು, ಅಂಗಡಿ ಮಾಲೀಕರು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಪಟ್ಟಣದ ಔಷಧಿ ಹಾಗೂ ಹಾಲಿನ ಅಂಗಡಿಗಳು ಮಾತ್ರ ಬಾಗಿಲು ತೆರೆದಿದ್ದವು. ಪಟ್ಟಣದ ವೀರ ಸಂಗೊಳ್ಳಿ ರಾಯಣ್ಣ ವೃತ್ತ, ಹಿರೇಮಠದ ದ್ವಾರಬಾಗಿಲು ವೃತ್ತ, ನ್ಯಾಮತಿ ರಸ್ತೆ, ತುಮ್ಮಿನಕಟ್ಟೆ ರಸ್ತೆ, ಟಿಬಿ ವೃತ್ತ ಸೇರಿದಂತೆ ವಿವಿಧ ವೃತ್ತಗಳು ಯಾವುದೇ ವಾಹನವಿಲ್ಲದೇ ಬಿಕೋ ಎನ್ನುತ್ತಿದ್ದವು.

ಭಾನುವಾರ ಬೆಳಿಗ್ಗೆಯಿಂದಲೇ ಪಟ್ಟಣದ ಪೌರ ಕಾರ್ಮಿಕರು, ಪೊಲೀಸರು, ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬರುವ ದ್ವಿಚಕ್ರ ವಾಹನ, ಟ್ರ್ಯಾಕ್ಟರ್, ಟ್ಯಾಕ್ಸಿ ವಾಹನದವರಿಗೆ ಕಡ್ಡಾಯವಾಗಿ ಮಾಸ್ಕ್ ಹಾಕಿಕೊಳ್ಳುವಂತೆ ತಿಳಿ ಹೇಳಿದರು.

## ಸರ್ಕಾರದ ಆದೇಶ ಪಾಲಿಸಿದ ಹರಿಹರ



ಹರಿಹರ, ಜು.12- ರಾಜ್ಯ ಮತ್ತು ಕೇಂದ್ರ ಸರ್ಕಾರ ಕೊರೊನಾ ಹರಡುವುದನ್ನು ನಿಯಂತ್ರಿಸಲು ಘೋಷಣೆ ಮಾಡಿರುವ ಭಾನುವಾರದ ಲಾಕ್‌ಡೌನ್‌ಗೆ ನಗರದ ಎಲ್ಲಾ ವ್ಯಾಪಾರಸ್ಥರು ಅಂಗಡಿ ಮುಂಗಟ್ಟುಗಳನ್ನು ಸ್ಥಗಿತಗೊಳಿಸುವ ಮೂಲಕ ಕೊರೊನಾ ರೋಗವನ್ನು ಮುಕ್ತ ಮಾಡುವುದಕ್ಕೆ ಬೆಂಬಲ ನೀಡಿದರು.

ನಗರದ ಜನನಿಬಿಡ ಪ್ರದೇಶವಾದ ತರಕಾರಿ ಮಾರುಕಟ್ಟೆ, ಮುಖ್ಯ ರಸ್ತೆ, ಗಾಂಧಿ ವೃತ್ತ, ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆ, ಹೈಸ್ಕೂಲ್ ಬಡಾವಣೆ, ಹರಪನಹಳ್ಳಿ ರಸ್ತೆ, ಹಳೇ ಪಿ.ಬಿ.ರಸ್ತೆ, ಶೋಭಾ ಟಾಕೀಸ್ ರಸ್ತೆ ಸೇರಿದಂತೆ ಇತರೆ ರಸ್ತೆಗಳಲ್ಲಿರುವ ಅಂಗಡಿ ಮುಂಗಟ್ಟುಗಳನ್ನು ಬೆಳಿಗ್ಗೆಯಿಂದ ರಾತ್ರಿವರೆಗೆ ಬಂದ್ ಮಾಡಲಾಗಿತ್ತು.

ಆಟೋ, ಟ್ಯಾಕ್ಸಿ, ಬಸ್ ಸಂಚಾರ ಗೂಡ್ಸ್ ವಾಹನ ಸೇವೆ ಸ್ಥಗಿತಗೊಂಡಿತು. ದಿನಸಿ ಪದಾರ್ಥಗಳು, ತರಕಾರಿ, ಹೋಟೆಲ್, ಬೇಕರಿ, ಗ್ಯಾರೇಜ್, ಪಾತ್ರೆ, ಬಟ್ಟೆ, ಬಂಗಾರ, ಕೈಗಾರಿಕೆ, ಟೈರ್, ಟ್ಯೂಬ್, ವರ್ಕ್ಸ್ ಶಾಪ್, ಗೊಬ್ಬರ, ಪೈಪ್, ಚಪ್ಪಲಿ, ಮೊಬೈಲ್ ಸೇರಿದಂತೆ ಹಲವಾರು ಅಂಗಡಿಗಳನ್ನು ಸ್ವಯಂ ಪ್ರೇರಿತವಾಗಿ ಬಂದ್ ಮಾಡುವ ಮೂಲಕ ಸರ್ಕಾರದ ಆದೇಶವನ್ನು ಪಾಲನೆ ಮಾಡಿದವು. ಅಲ್ಲೊಂದು ಇಲ್ಲೊಂದು ಔಷಧಿ ಅಂಗಡಿ ಮತ್ತು ಖಾಸಗಿ ಆಸ್ಪತ್ರೆ ಬಿಟ್ಟರೆ ಉಳಿದ ಎಲ್ಲಾ ರೀತಿಯ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಪೌರಾಯುಕ್ತರಾದ ಎಸ್.ಲಕ್ಷ್ಮಿ, ಸಿಪಿಐ ಎಸ್.ಶಿವಪ್ರಸಾದ್, ಪಿಎಸ್ಐ ಎಸ್.ಶೈಲಜಾ ಹಾಜರಿದ್ದರು.

## ಬಿಕೋ ಎನ್ನುತ್ತಿದ್ದ ರಾಣೇಬೆನ್ನೂರು



ಹಳೇ ಪಿಬಿ ರಸ್ತೆಯಲ್ಲಿ ವಿಶ್ರಮಿಸುತ್ತಿರುವ ದನ ಕರುಗಳು

ರಾಣೇಬೆನ್ನೂರು, ಜು.12- ಕೊರೊನಾ ತಡೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿದ ಭಾನುವಾರದ ಕರ್ಫ್ಯೂಗೆ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಉತ್ತಮ ಸ್ಪಂದನೆ ದೊರೆತಿದೆ.

ಕರ್ಫ್ಯೂ ಹಿನ್ನೆಲೆಯಲ್ಲಿ ಬೆಳಿಗ್ಗೆಯಿಂದಲೇ ಕೇವಲ ಔಷಧಿ ಅಂಗಡಿಗಳು ಹಾಗೂ ಪೆಟ್ರೋಲ್ ಬಂಕ್‌ಗಳು ಮಾತ್ರ ತೆರೆದಿದ್ದವು. ಪ್ರಮುಖ ಮಾರುಕಟ್ಟೆ ಪ್ರದೇಶಗಳು ಸೇರಿದಂತೆ ನಗರದ ಎಲ್ಲಾ ಕಡೆಗಳಲ್ಲಿ ಅಂಗಡಿ ಮುಂಗಟ್ಟುಗಳ ಬಾಗಿಲು ಹಾಕಲಾಗಿತ್ತು. ಜನ ಸಂಚಾರ ತುಂಬಾ ವಿರಳವಾಗಿತ್ತು.

ಕರ್ಫ್ಯೂ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸೇವೆಯನ್ನು ಬಂದ್ ಮಾಡಿದ್ದರಿಂದ ಬಸ್‌ನಿಲ್ದಾಣ ಸಂಪೂರ್ಣ ಖಾಲಿಯಾಗಿತ್ತು. ಕರ್ಫ್ಯೂ ಸಮಯದಲ್ಲಿ ಅನಗತ್ಯವಾಗಿ ಬೈಕ್‌ಗಳಲ್ಲಿ ಸಂಚರಿಸುವವರ ನಿಯಂತ್ರಣಕ್ಕಾಗಿ ನಗರದ ಪ್ರಮುಖ ಸ್ಥಳಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಆದರೂ ಕೂಡ ಕೆಲವು ಬೈಕ್ ಸವಾರರು ಔಷಧಿ ಚೀಟಿ ತೋರಿಸಿ ಪಾರಾಗುವ ಪ್ರಯತ್ನ ಮಾಡುತ್ತಿರುವುದು ಕಂಡುಬಂದಿತು. ನಗರದಲ್ಲಿ ಪ್ರಮುಖ ಸ್ಥಳಗಳಲ್ಲಿ ಕೆಲವು ತರಕಾರಿ ಮಾರುತ್ತಿದ್ದರು. ಇನ್ನೂ ನಗರದ ಎಂ.ಜಿ.ರಸ್ತೆಯಲ್ಲಿ ರಸ್ತೆ ದುರಸ್ತಿ ಕಾರ್ಯ ಅಬಾಧಿತವಾಗಿ ನಡೆದಿದ್ದು, ಕಾರ್ಮಿಕರು ಕೆಲಸದಲ್ಲಿ ನಿರತರಾಗಿದ್ದರು. ಇನ್ನೂ ಕೆಲವು ಕಡೆ ಕಟ್ಟಡ ಕಾರ್ಮಿಕರು ಕೆಲಸ ಮಾಡುವುದು ಕಂಡು ಬಂದಿತ್ತು.

# ಲಾಕ್ ಡೌನ್ : ಹಾಸ್ಟೆಲ್‌ನಲ್ಲಿ ವೈದ್ಯ ವಿದ್ಯಾರ್ಥಿಗಳ ಮುಷ್ಕರ

**ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಅಸಮಾಧಾನ**

ದಾವಣಗೆರೆ, ಜು.12- ಶಿಷ್ಯ ವೇತನಕ್ಕಾಗಿ ಆಗ್ರಹಿಸಿ, ಜೆಜೆಎಂ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಮತ್ತು ಗೃಹ ವೈದ್ಯ ವಿದ್ಯಾರ್ಥಿಗಳು ಕೈಗೊಂಡಿರುವ ಅನಿರ್ದಿಷ್ಟಾವಧಿ ಮುಷ್ಕರವು ಇಂದಿಗೆ 14 ದಿನಗಳನ್ನು ಪೂರೈಸಿದೆ.

ವಿದ್ಯಾರ್ಥಿಗಳು ಇಂದು ಹಾಸ್ಟೆಲ್‌ನಲ್ಲಿ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಮತ್ತು ಕಿವಿ ಮುಚ್ಚಿಕೊಂಡು ಪ್ರತಿಭಟಿಸುವ ಮುಖೇನ ಸರ್ಕಾರ ಕುರುಡು ಮತ್ತು ಕಿವುಡುತನ ಪ್ರದರ್ಶಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭಾನುವಾರದ ಲಾಕ್‌ಡೌನ್ ಗೆ ಮನ್ನಣೆ ನೀಡಿದ ವಿದ್ಯಾರ್ಥಿಗಳು ನಗರದ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿ ನಡೆಸಲಾಗುತ್ತಿದ್ದ ಮುಷ್ಕರದ ಸ್ಥಳದಲ್ಲಿ ವೈದ್ಯ ವೃತ್ತಿಯ ಕಳಶಪ್ರಾಯವಾಗಿರುವ ಬಿಳಿ ಕೋಟು ನೇತು ಹಾಕಿ ಮುಷ್ಕರ ಮುಂದುವರೆದಿದೆ ಎಂಬ ಸಂದೇಶ ರವಾನೆ ಮಾಡಿದರು.

ವೈದ್ಯಕೀಯ ವಿದ್ಯಾರ್ಥಿ ಡಾ. ಸುಧಾಕರ್ ಮಾತನಾಡಿ, ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೊರೊನಾ ವಾರಿಯರ್ಸ್‌ಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮಕ್ಕೆ ಸರ್ಕಾರ ಹಣ ವ್ಯಯ ಮಾಡಿದೆ.

ಆದರೆ, ಅಲ್ಲಿ ಬಂದಂತಹ ಅನೇಕ ವೈದ್ಯ ವಿದ್ಯಾರ್ಥಿಗಳು ಸಂಬಳವಿಲ್ಲದೇ ಕೆಲಸ ಮಾಡಿದ್ದಾರೆ. ಈ ವಿದ್ಯಾರ್ಥಿಗಳಿಗೆ ಹೂವು ಹಾಕುವುದು, ಚಪ್ಪಾಳೆ ಹೊಡೆದರೆ ಹೊಟ್ಟೆ ತುಂಬುವುದಿಲ್ಲ. ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕ ಕಟ್ಟಬೇಕು. ಸಾಲ ಕಟ್ಟಬೇಕು. ಲಕ್ಷ ಲಕ್ಷ ವಿದ್ಯಾರ್ಥಿ ವೇತನ ಕೊಡುವುದು ಬಾಕಿ ಇದೆ. ಅದನ್ನು ಕೊಡಿ ಎಂಬ ಅಭಿಪ್ರಾಯವಿದೆ. ಇಂತಹ ಕಾರ್ಯಕ್ರಮಗಳು ಯಾರನ್ನು ಖುಷಿಪಡಿಸಲು ? ಎಂದು ಪ್ರಶ್ನಿಸಿದರು.

# ರಾಜ್ಯದಲ್ಲಿ ಕೊರೊನಾ ಸೋಂಕು ದುಪ್ಪಟ್ಟಾಗಬಹುದು



ಬೆಂಗಳೂರು, ಜು. 12 – ಮುಂದಿನ 15 ರಿಂದ 30 ದಿನಗಳಲ್ಲಿ ರಾಜ್ಯದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗಬಹುದು. ಆದರೆ, ಜನರು ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ಆರೋಗ್ಯ ಸಚಿವ ಬಿ. ಶ್ರೀರಾಮುಲು ತಿಳಿಸಿದ್ದಾರೆ.

ಮುಂದಿನ ಎರಡು ತಿಂಗಳು ಸರ್ಕಾರಕ್ಕೆ ಸವಾಲಿನದ್ದಾಗಿದೆ ಎಂದು ಹೇಳಿರುವ ಸಚಿವ ಶ್ರೀರಾಮುಲು, ಜನರು ನಿಯ ಮಗಳನ್ನು ಪಾಲಿಸಿ ಸುರಕ್ಷಿತವಾಗಿರುವಂತೆ ಕರೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಲಾಕ್‌ಡೌನ್ ಹೇರಿಕೆ ಮಾಡಲಾಗಿದೆ. ಪ್ರತಿದಿನ 2 ಸಾವಿರದಷ್ಟು ಕೊರೊನಾ ಪ್ರಕರಣಗಳು ಕಂಡು ಬರುತ್ತಿವೆ. ಕೊರೊನಾ ಸೋಂಕುಗಳ ಸಂಖ್ಯೆ ರಾಜ್ಯದಲ್ಲಿ ಮುಂದಿನ 30 ದಿನಗಳಲ್ಲಿ ದುಪ್ಪಟ್ಟಾಗಬಹುದಾಗಿದೆ ಎಂದವರು ಟ್ವೀಟ್ ಮೂಲಕ ಹೇಳಿದ್ದಾರೆ.

ಕೊರೊನಾ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಜನರು ಆತಂಕಗೊಳ್ಳುವ ಇಲ್ಲವೇ ಆಶಾಭಾವನೆ ಕಳೆದುಕೊಳ್ಳುವ ಅಗತ್ಯವಿಲ್ಲ ಎಂದಿದ್ದಾರೆ.

# ಡೀಸೆಲ್ ಬೆಲೆ 16 ಪೈಸೆ ಹೆಚ್ಚಳ

ನವದೆಹಲಿ, ಜು. 12 – ಡೀಸೆಲ್ ಬೆಲೆಯನ್ನು 16 ಪೈಸೆಯಷ್ಟು ಹೆಚ್ಚಿಸಲಾಗಿದೆ. ನಾಲ್ಕು ದಿನಗಳ ನಂತರ ಇಂಧನದ ಬೆಲೆ ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ರಾಜಧಾನಿ ದೆಹಲಿಯಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ 80.94 ರೂ.ಗಳವರೆಗೆ ತಲುಪಿದೆ. ಡೀಸೆಲ್ ಬೆಲೆ ಈ ಮಟ್ಟಕ್ಕೆ ಬಂದಿರುವುದು ಇದೇ ಮೊದಲು. ಪೆಟ್ರೋಲ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರೆದಿದೆ. ಕಳೆದ ಎರಡು ವಾರಗಳಲ್ಲಿ ಪೆಟ್ರೋಲ್ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಸ್ಥಳೀಯ ತೆರಿಗೆಗಳನ್ನು ಆಧರಿಸಿ ರಾಜ್ಯದಿಂದ ರಾಜ್ಯಕ್ಕೆ ತೈಲ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ.

# ಸೈಕಲ್ ಏರಿ ಪ್ರಮುಖ ಬೀದಿಗಳನ್ನು ಸುತ್ತಿ ಲಾಕ್ ಡೌನ್ ಸ್ಥಿತಿ ಪರಿಶೀಲಿಸಿದ ಅಧಿಕಾರಿಗಳು



**ಹರಪನಹಳ್ಳಿ**

ಹರಪನಹಳ್ಳಿ, ಜು.12- ಕೋವಿಡ್ ಸೋಂಕು ಹೆಚ್ಚಳದ ನಡುವೆ ಆರೋಗ್ಯದ ದೃಷ್ಟಿಯಿಂದ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ, ವೃತ್ತ ನಿರೀಕ್ಷಕ ಕೆ.ಕುಮಾರ್, ಪಿಎಸ್ಐ ಪ್ರಕಾಶ್ ಅವರುಗಳು ಸಿವಿಲ್ ಡ್ರೆಸ್‌ನಲ್ಲಿ ಸೈಕಲ್ ಏರಿ ಪಟ್ಟಣದ ಪ್ರಮುಖ ಬೀದಿಗಳನ್ನು ಸುತ್ತಿ ಲಾಕ್‌ಡೌನ್ ಸ್ಥಿತಿ ಪರಿಶೀಲಿಸಿದರು.

ಕೋವಿಡ್ ಸೋಂಕು ಹೆಚ್ಚಳದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಭಾನುವಾರದ ಎರಡನೇ ಲಾಕ್‌ಡೌನ್‌ಗೆ ಪಟ್ಟಣದ ಜನತೆ ಸ್ಪಂದನೆ ನೀಡಿದ್ದಾರೆ. ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು. ಸರ್ಕಾರಿ ಹಾಗೂ ಖಾಸಗಿ ವಾಹನಗಳು ರಸ್ತೆಗೆ ಇಳಿಯಲಿಲ್ಲ.

ಕೆಲವೊಂದು ಬೈಕ್ ಸವಾರರು ರಸ್ತೆಗಿಳಿದಾಗ ಪೊಲೀಸರು ಅಂತಹ ಬೈಕ್‌ಗಳನ್ನು ಸೀಜ್ ಮಾಡಿ, ಸಂಜೆ ದಂಡ ವಿಧಿಸಿ ಬಿಡುಗಡೆಗೊಳಿಸಿದರು. ಗ್ರಾಮೀಣ ಭಾಗದಿಂದ ಕೆಲವರು ಆಸ್ಪತ್ರೆಗಳಿಗೆ ಪಟ್ಟಣಕ್ಕೆ ಆಗಮಿಸಿದ್ದರು. ಹಾಲು, ವೈದ್ಯಕೀಯ ಸೇವೆ ಸೇರಿದಂತೆ ಅಗತ್ಯ ವಸ್ತುಗಳು ಹೊರತು ಪಡಿಸಿ, ಇತರೆ ಎಲ್ಲಾ ಅಂಗಡಿಗಳು ಮುಚ್ಚಿದ್ದವು.

ಈ ಕುರಿತು ಪ್ರತಿಕ್ರಿಯೆ ನೀಡಿದ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ ಅವರು, ಹಿಂದಿನ ಭಾನುವಾರ ಬಳ್ಳಾರಿಯಲ್ಲಿ ಎಸ್ಪಿಯವರು ಸೈಕಲ್ ಮೇಲೆ ನಗರ ಸುತ್ತಾಡಿದ್ದರು. ಅವರ ಪ್ರೇರಣೆಯಿಂದ ನಾವೂ ಸಹ ಇಂದು ಸೈಕಲ್ ಏರಿ ಪಟ್ಟಣದ ಪರಿಸ್ಥಿತಿ ವೀಕ್ಷಿಸಿದೆವು. ಇದರಿಂದ ನಮ್ಮ ಆರೋಗ್ಯಕ್ಕೂ ಒಳ್ಳೆಯದು ಎಂದರು.


# ಅಶ್ರುತರ್ಪಣ



ದಿನಾಂಕ 12.07.2020ರ ಭಾನುವಾರ ನಿಧನರಾದ
ಹರಪನಹಳ್ಳಿ ತಾಲ್ಲೂಕು ಅರಸೀಕೆರೆಯ ನಿವೃತ್ತ ಶಿಕ್ಷಕರೂ, ಹಿರಿಯರೂ,
ನಮ್ಮ ಮಾರ್ಗದರ್ಶಕರೂ, ಬಂಧುಗಳೂ, ನಮ್ಮ ಆತ್ಮೀಯ ಒಡನಾಡಿಗಳೂ ಆದ

**ಶ್ರೀ ಸಿದ್ದಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಎಸ್.ವಿ. ರಾಮಚಂದ್ರ ಅಭಿಮಾನಿಗಳ ಬಳಗ**
**ಜಗಳೂರು - ಹರಪನಹಳ್ಳಿ.**


# ಕೊರೊನಾ : ದೆಹಲಿಯಲ್ಲಿ ಶೇ.80ಕ್ಕೆ ತಲುಪಿದ ಚೇತರಿಕೆ

**ಕ್ರೀಡಾಂಗಣಗಳನ್ನು ಚಿಕಿತ್ಸಾ ಕೇಂದ್ರ ಮಾಡುವ ಯೋಜನೆಗಳಿಗೆ ತಡೆ**

ನವದೆಹಲಿ, ಜು. 12 – ದೆಹಲಿಯಲ್ಲಿ ಸತತ ಎರಡನೇ ದಿನ ಕೊರೊನಾ ಸೋಂಕಿತರ ಸಂಖ್ಯೆ 2 ಸಾವಿರಕ್ಕಿಂತ ಕಡಿಮೆ ಹಂತದಲ್ಲಿದ್ದು, ಚೇತರಿಸಿಕೊಂಡವರ ಪ್ರಮಾಣ ಶೇ.80ರ ಹತ್ತಿರಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಕ್ರೀಡಾಂಗಣಗಳನ್ನು ತಾತ್ಕಾಲಿಕ ಕೊರೊನಾ ವೈರಸ್ ಕಾಳಜಿ ಕೇಂದ್ರಗಳನ್ನಾಗಿ ಪರಿವರ್ತಿಸುವ ಯೋಜನೆಗಳನ್ನು ತಡೆದಿದ್ದಾರೆ.

ಕಳೆದ 24 ಗಂಟೆಗಳಲ್ಲಿ ರಾಜಧಾನಿಯಲ್ಲಿ 1,573 ಕೊರೊನಾ ಸೋಂಕುಗಳು ಕಂಡು ಬಂದಿವೆ. ಇದರಿಂದಾಗಿ ಒಟ್ಟು ಸೋಂಕಿತರ ಸಂಖ್ಯೆ 1.12 ಲಕ್ಷಕ್ಕೆ ತಲುಪಿದೆ. 3,371 ಜನರು ಸಾವನ್ನಪ್ಪಿದ್ದಾರೆ.

ಜುಲೈನಲ್ಲಿ ಇದೇ ಮೊದಲ ಬಾರಿಗೆ ಸತತ ಎರಡು ದಿನ ಪ್ರಕರಣಗಳ ಸಂಖ್ಯೆ ಎರಡು ಸಾವಿರಕ್ಕೂ ಕಡಿಮೆ ಇದೆ. ಶನಿವಾರ 1,781 ಸೋಂಕಿತರು ಕಂಡು ಬಂದಿದ್ದರು.

ಇದುವರೆಗೂ ಶೇ.79.97ರಷ್ಟು ಜನರು ಚೇತರಿಸಿಕೊಂಡಿದ್ದಾರೆ. ಒಟ್ಟಾರೆ ಸುಮಾರು 90 ಸಾವಿರ ಜನರು ಇದುವರೆಗೂ ಚೇತರಿಸಿಕೊಂಡಿದ್ದಾರೆ. ನಗರದಲ್ಲಿ ಸಕ್ರಿಯ ಸೋಂಕುಗಳ ಪ್ರಮಾಣ 19,155 ಆಗಿದೆ.

ಸೋಂಕುಗಳ ಪ್ರಮಾಣ ಹೆಚ್ಚಾಗುತ್ತಿದ್ದ ಹಿನ್ನೆಲೆಯಲ್ಲಿ ಹಲವಾರು ಕ್ರೀಡಾಂಗಣಗಳನ್ನು ಕೊರೊನಾ ಕಾಳಜಿ ಕೇಂದ್ರಗಳಾಗಿ ಪರಿವರ್ತಿಸಲು ನಿರ್ಧರಿಸಲಾಗಿತ್ತು. ಆದರೆ, ಬದಲಾದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಕ್ರಮವನ್ನು ತಡೆಯಲಾಗಿದೆ.

# ಗುಂಪು ಘರ್ಷಣೆಯಲ್ಲಿ ಗುಂಡು ಹಾರಿಸಿದ ಶಾಸಕ

ಚೆನ್ನೈ, ಜು. 12 – ತಮಿಳುನಾಡಿನಲ್ಲಿ ಡಿಎಂಕೆ ಶಾಸಕ ಹಾಗೂ ಕಟ್ಟಡ ನಿರ್ಮಾಣಕಾರನ ನಡುವಿನ ವಿವಾದ ಗುಂಪು ಘರ್ಷಣೆಯಾಗಿ ಪರಿಣಮಿಸಿದ್ದು, ಶಾಸಕ ಗುಂಡು ಹಾರಿಸಿರುವುದಾಗಿ ಆರೋಪಿಸಲಾಗಿದೆ.


ಶಾಸಕ ಎಲ್. ಇಧಯವರ್ಮನ್ ಹಾಗೂ ಡೆವಲಪರ್ ಕುಮಾರ್ ಇನ್ನಿತರೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ತಿರುಪೊರೂರ್ ಬಳಿಯ ಸೆಂಗಡು ಹಳ್ಳಿಯಲ್ಲಿ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ತಗಾದೆ ಉಂಟಾಗಿತ್ತು. ಆಗ ಶಾಸಕ ಗುಂಡು ಹಾರಿಸಿರುವುದಾಗಿ ಆರೋಪಿಸಲಾಗಿದೆ. ಈ ಬಂದೂಕಿಗೆ ಅನುಮತಿ ಇದೆ ಎಂದು ಅವರು ಹೇಳಿದ್ದಾರಾದರೂ, ಅದರ ಅನುಮತಿ ಅವಧಿ ಮೀರಿದೆ.

ಶಾಸಕ ಗುಂಡು ಹಾರಿಸಿದಾಗ ಅದು ಓರ್ವ ವ್ಯಕ್ತಿಯನ್ನು ಗಾಯಗೊಳಿಸಿದೆ ಎಂದು ದೂರು ನೀಡಲಾಗಿದೆ. ಘರ್ಷಣೆಯ ನಂತರ ಗುಂಪು ಅಲ್ಲಿದ್ದ ಹಲವು ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕುಮಾರ್ ಕಡೆಯ 50ಕ್ಕೂ ಹೆಚ್ಚು ರೌಡಿಗಳು ಹಲ್ಲೆ ನಡೆಸಿ ಗುಂಡು ಹಾರಿಸಿದ್ದಾರೆ ಎಂದು ಶಾಸಕರ ಬಣದವರು ದೂರಿದ್ದಾರೆ.

# ಮೆಕ್ಕೆಜೋಳಕ್ಕೆ ಸೈನಿಕ ಹುಳ ಬಾಧೆ



ಮಲೇಬೆನ್ನೂರು, ಜು.12- ಇಲ್ಲಿನ ಆಶ್ರಯ ಕಾಲೋನಿ ಹಿಂಭಾಗದಲ್ಲಿರುವ ಗುಡ್ಡದ ಜಮೀನುಗಳಲ್ಲಿ ಬೆಳೆಯಲಾಗಿರುವ ಮೆಕ್ಕೆಜೋಳದಲ್ಲಿ ಸೈನಿಕ ಹುಳುವಿನ ಹಾವಳಿ ಹೆಚ್ಚಾಗಿದೆ. ಪ್ರಾಥಮಿಕ ಹಂತದ ಹುಳುಗಳು ಎಲೆಯ ಮೇಲ್ಭಾಗವನ್ನು ಕೆರೆದು ತಿನ್ನುತ್ತಿವೆ. ಹುಳುಗಳು ಕೆರೆದ ಭಾಗವು ಬಿಳಿಯಾಗಿ ಕಾಣುತ್ತದೆ. ನಂತರ ಹುಳುಗಳು ಸುಳಿಯಲ್ಲಿ ಸೇರಿ ಚಿಗುರುತ್ತಿರುವ ಸುಳಿಯನ್ನು ತಿನ್ನುತ್ತವೆ ಎಂದು ರೈತ ಹಾಗೂ ಪುರಸಭೆ ಸದಸ್ಯ ಬಿ.ಸುರೇಶ್ ಆತಂಕ ವ್ಯಕ್ತಪಡಿಸಿದ್ದಾರೆ.

JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte